# ಹಂಪಿ ಟೈಮ್ಸ್
HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 • ಸಂಚಿಕೆ: 197 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 07.02.2025 • ಶುಕ್ರವಾರ • ಪುಟ:04 • ಬೆಲೆ:2

Volume:02 • Issue: 197 • PRGI No:KARKAN/2023/88055 • VIJAYANAGARA • 07.02.2025 • Friday • Page:04 • Rs:2





ಓದುಗರ ಬೆರಳ ತುದಿಗೆ ನಿಮ್ಮ ಬ್ರಾಂಡ್, ನಿಮ್ಮ ವ್ಯವಹಾರ, ಸೇವೆ/ವಿಶೇಷ ಕೊಡುಗೆಗಳನ್ನು ಹಂಪಿ ಟೈಮ್ಸ್ ಮೂಲಕ ಹೆಚ್ಚು ಓದುಗರಿಗೆ ತಲುಪಿಸಿ.

1,10,000+ Digital E-PAPER READERS

No.1 HAMPI TIMES LEADING VIJAYANAGARA District News Paper

Contact for Advertisements: 9448633038


## ದೇವಾಲಯ ದರ್ಶನ



ಹಂಪಿ ಶ್ರೀ ವಿರೂಪಾಕ್ಷೇಶ್ವರ ದರ್ಶನ

ನಿತ್ಯ ಅಭಿಷೇಕ ಸಮಯ
ಬೆಳಿಗ್ಗೆ: 6:30, 10:30 ಸಂಜೆ 6:30ಕ್ಕೆ

-: ದರ್ಶನ ಸಮಯ :-
ಬೆಳಿಗ್ಗೆ 6.30 ರಿಂದ ಮಧ್ಯಾಹ್ನ 1.15ರವರೆಗೆ
ಮಧ್ಯಾಹ್ನ 3 ರಿಂದ ರಾತ್ರಿ 7.30ರವರೆಗೆ



## ಮನೆ ಬಾಡಿಗೆಗೆ ಇದೆ

ಹೊಸಪೇಟೆಯ ವಿವೇಕಾನಂದನಗರದಲ್ಲಿ ಶ್ರೀನಿವಾಸ ಅಪಾರ್ಟ್‌ಮೆಂಟ್ ಎದುರುಗಡೆ, ಸಮರ್ಪಕ (ಸಿಹಿ & ಬೋರ್‌ವೆಲ್) ನೀರಿನ ಸೌಲಭ್ಯ ಇರುವ ಡಬಲ್ ಬೆಡ್‌ರೂಂ ಮನೆ ಬಾಡಿಗೆಗೆ ಇದೆ. ಆಸಕ್ತರು ನೇರವಾಗಿ ಸಂಪರ್ಕಿಸಿ

M: 9909978170
M: 9448867485


## ಇಂದು ಹೊಸಪೇಟೆಗೆ ಸಹಕಾರ ಸಚಿವ ರಾಜಣ್ಣ

■ ಹಂಪಿ ಟೈಮ್ಸ್ ಹೊಸಪೇಟೆ



ಸಹಕಾರ ಸಚಿವ ಕೆ.ಎನ್.ರಾಜಣ್ಣ ಅವರು ಫೆ. 7 ರಂದು ವಿಜಯನಗರ ಜಿಲ್ಲೆಗೆ ಆಗಮಿಸಲಿದ್ದು, ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಶಾಲಾ ಕಾಲೇಜುಗಳಲ್ಲಿ ಅವಶ್ಯವಿರುವ ಮೂಲಭೂತ ಸೌಲಭ್ಯಗಳಿಗೆ ಸಂಬಂಧಿಸಿದಂತೆ ಸಭೆ ಮಾಡಲಿದ್ದಾರೆ. ಫೆ.8ರಂದು ಕೊಪ್ಪಳ ಜಿಲ್ಲಾ ಪ್ರವಾಸ ಮಾಡಲಿದ್ದಾರೆ.

# ಸದೃಢ ರಾಷ್ಟ್ರ ನಿರ್ಮಾಣದಲ್ಲಿ ವಿದ್ಯಾರ್ಥಿಗಳ ಪಾತ್ರ ಮುಖ್ಯ

### ಬಳ್ಳಾರಿ ಡಿಸಿ ಪ್ರಶಾಂತ್ ಕುಮಾರ್ ಮಿಶ್ರಾ ಹೇಳಿಕೆ | ಮುಂಜಾನೆಯ-ಮುಸ್ಸಂಜೆಯ ಮಾತು ಮತ್ತು ಮಂಥನ



■ ಹಂಪಿ ಟೈಮ್ಸ್ ಬಳ್ಳಾರಿ

ಸ್ಪರ್ಧಾತ್ಮಕ ಯುಗದಲ್ಲಿ ಸದೃಢ ರಾಷ್ಟ್ರ ನಿರ್ಮಾಣಕ್ಕೆ ವಿದ್ಯಾರ್ಥಿಗಳ ಪಾತ್ರ ಬಹುಮುಖ್ಯ ಎಂದು ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಹೇಳಿದರು.

ಬುಧವಾರದಂದು, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಆವರಣ ದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ರಾಷ್ಟ್ರೀಯ ಸೇವಾ ಯೋಜನೆ ಘಟಕ ಬಳ್ಳಾರಿ, ಉನ್ನತಿ ಫೌಂಡೇಶನ್ ಬೆಂಗಳೂರು, ಉದ್ಯೋಗ- ಕೌಶಲ್ಯ ಅಭಿವೃದ್ಧಿ ಘಟಕ ಸಿಡಾಕ್ ಧಾರವಾಡ ಇವರ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ 'ವಿದ್ಯಾರ್ಥಿಗಳ ಶ್ರೇಯಸ್ಸಿಗಾಗಿ ಮುಂಜಾನೆಯ ಹಾಗೂ ಮುಸ್ಸಂಜೆಯ ಮಾತು ಮತ್ತು ಮಂಥನ' ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ತಮ್ಮ ಭವಿಷ್ಯ ರೂಪಿಸಿಕೊಳ್ಳುವ ಶಕ್ತಿ ವಿದ್ಯಾರ್ಥಿಗಳ ಕೈಯಲ್ಲಿದೆ. ಸತತ ಪ್ರಯತ್ನ ಮತ್ತು ಗುಣಮಟ್ಟದ ವಿದ್ಯಾಭ್ಯಾಸದಿಂದ ವಿದ್ಯಾರ್ಥಿಗಳು ಯಶಸ್ಸು ಕಾಣಬಹುದು. ಉನ್ನತ ಸ್ಥಾನಮಾನದ ಉದ್ಯೋಗದ ಕನಸು ಹೊಂದಿರುವವರು ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸುವುದು ಮುಖ್ಯವಾಗಿದೆ ಎಂದು ತಿಳಿಸಿದರು.

ಐಎಎಸ್, ಐಪಿಎಸ್ ಗಳಂತ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಪ್ರಿಲಿಮ್ಸ್, ಮೇನ್ಸ್ ಮತ್ತು ಸಂದರ್ಶನ ಎಂದು ಮೂರು ಹಂತ ಇರುತ್ತವೆ. ವಿದ್ಯಾರ್ಥಿಗಳು ಸ್ವಯಂ ಪ್ರೇರಣೆ, ಸಾಫ್ಟ್ ಸ್ಕಿಲ್ ಕೌಶಲ್ಯ ಅಳವಡಿಸಿಕೊಂಡು ಯಶಸ್ಸು ಕಾಣಬಹುದು ಎಂದು ಹೇಳಿದರು.

ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಎಂ.ಮುನಿರಾಜು ಅವರು ಅಧ್ಯಕ್ಷತೆ ವಹಿಸಿ ಅವರು ಮಾತನಾಡಿ, ವಿದ್ಯಾರ್ಥಿಗಳು ಜೀವನದಲ್ಲಿ ಶಿಸ್ತು ಮತ್ತು ಸಮಯ ನಿರ್ವಹಣೆ ಪ್ರಜ್ಞೆ ಬೆಳೆಸಿಕೊಳ್ಳಬೇಕು. ಸ್ಪರ್ಧಾತ್ಮಕ ಪರೀಕ್ಷೆಗೆ ಪಠ್ಯಕ್ರಮ ಅಧ್ಯಯನದ ಜೊತೆಗೆ ದಿನ-ಪತ್ರಿಕೆ ಓದುವ ಹವ್ಯಾಸ ವೃದ್ಧಿಸಿಕೊಳ್ಳಬೇಕು ಎಂದು ಹೇಳಿದರು.

ಪದವಿ ಹಂತದಲ್ಲಿ ಅನೇಕ ಹೊಸ ಕೋರ್ಸ್‌ಗಳನ್ನು ಆರಂಭಿಸಲು ವಿಶ್ವವಿದ್ಯಾಲಯವು ಮುನ್ನುಡಿ ಬರೆದಿದೆ. ವಿದ್ಯಾರ್ಥಿಗಳಿಗೆ ಕೌಶಲ್ಯ ತರಬೇತಿ ನೀಡಿ ಅಭಿವೃದ್ಧಿಪಡಿಸುವುದು ವಿವಿಯ ಗುರಿಯಾಗಿದೆ ಎಂದರು.

ವಿಶ್ವವಿದ್ಯಾಲಯದ ಕುಲಸಚಿವರಾದ ರುದ್ರೇಶ ಎಸ್.ಎನ್ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಕೌಶಲ್ಯ ಅಭಿವೃದ್ಧಿ ಅಧಿಕಾರಿ ಪ್ರಾಣೇಶ್.ಎಸ್., ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕ ಸೋಮಶೇಖರ್ ಸೇರಿದಂತೆ ವಿವಿಧ ನಿಕಾಯಗಳ ಡೀನರು, ವಿವಿಧ ವಿಭಾಗಗಳ ಮುಖ್ಯಸ್ಥರು, ಸಂಯೋಜಕರು, ಬೋಧಕರು, ಸಂಶೋಧನಾ ವಿದ್ಯಾರ್ಥಿಗಳು, ಬೋಧಕೇತರ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಹಾಜರಿದ್ದರು.

## ಪ್ರಶ್ನೆ ಕೇಳಿ ಗೊಂದಲ ನಿವಾರಿಸಿಕೊಳ್ಳಿ ಫೆ.9 ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗಾಗಿ ಫೋನ್ ಇನ್ ಕಾರ್ಯಕ್ರಮ

### ಬೆಳಿಗ್ಗೆ 11 ರಿಂದ 12 ರವರೆಗೆ ಬಿಇಒ ಎಂ.ಚನ್ನಬಸಪ್ಪ ಹೇಳಿಕೆ

■ ಹಂಪಿ ಟೈಮ್ಸ್ ಹೊಸಪೇಟೆ



ಕ್ಷೇತ್ರ ಶಿಕ್ಷಣಾಧಿಕಾರಿ ಕಾರ್ಯಾ ಲಯ, ಹೊಸಪೇಟೆ ಮತ್ತು ಹಂಪಿ ಟೈಮ್ಸ್ ದಿನಪತ್ರಿಕೆ ಸಹಯೋಗದಲ್ಲಿ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗಾಗಿ ಫೆ.9, ಭಾನುವಾರ ಬೆಳಿಗ್ಗೆ 11 ರಿಂದ 12 ರವರೆಗೆ ಫೋನ್ ಇನ್ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಬಿಇಒ ಎಂ.ಚನ್ನಬಸಪ್ಪ ತಿಳಿಸಿದ್ದಾರೆ.

ವಿದ್ಯಾರ್ಥಿಗಳು ವಾರ್ಷಿಕ ಪರೀಕ್ಷೆಗೆ ಹೇಗೆ ಸಿದ್ಧಗೊಳ್ಳಬೇಕು, ವಿಷಯ ವಸ್ತುಗಳ ಬಗೆಗಿನ ಅನುಮಾನ-ಗೊಂದಲಗಳಿದ್ದಲ್ಲಿ, ಭಯರಹಿತ ಪರೀಕ್ಷೆ ಎದುರಿಸುವ ಬಗೆ ಹಾಗೂ ವಿಷಯಕ್ಕೆ ಸಂಬಂಧಿಸಿದಂತೆ ವಿದ್ಯಾರ್ಥಿಗಳು/ಪಾಲಕರು ಕೇಳುವ ಪ್ರಶ್ನೆಗಳಿಗೆ ತಜ್ಞ ವಿಷಯ ಶಿಕ್ಷಕರು ಉತ್ತರಿಸಲಿದ್ದಾರೆ.

ಕನ್ನಡ ವಿಷಯಕ್ಕೆ ಸಂಬಂಧಿಸಿದಂತೆ ಮೊ: 9880019171/7892989253, ಇಂಗ್ಲೀಷ್: 8317363832/ 9901735338, ಹಿಂದಿ: 9845400842 / 9886500568, ಸಮಾಜ ವಿಜ್ಞಾನ: 9964036271/ 8660953524, ವಿಜ್ಞಾನ: 9945118741/ 9449020826, ಗಣಿತ: 7892441428/ 8884816581 ಗೆ ಆಯಾ ವಿಷಯಕ್ಕೆ ಸಂಬಂಧಿಸಿದಂತೆ ನೀಡಲಾದ ಮೊಬೈಲ್ ನಂಬರ್‌ಗಳಿಗೆ ನಿಗಧಿತ ಸಮಯದೊಳಗೆ ವಿದ್ಯಾರ್ಥಿಗಳು ಅಥವಾ ಪಾಲಕರು ಕರೆಮಾಡಿ ಗೊಂದಲ ನಿವಾರಿಸಿಕೊಂಡಲ್ಲಿ ಉತ್ತಮ ಅಭ್ಯಾಸದೊಂದಿಗೆ ಗರಿಷ್ಠ ಅಂಕ ಪಡೆಯಲು ಸಾಧ್ಯ. ಕರೆಮಾಡುವ ಮುನ್ನ ಕೇಳಬೇಕಾದ ಪ್ರಶ್ನೆಗಳನ್ನು ಸ್ಪಷ್ಟವಾಗಿ ಬರೆದಿಟ್ಟುಕೊಂಡು ನಂತರ ಕರೆ ಮಾಡಬೇಕು ಎಂದು ತಿಳಿಸಿದ್ದಾರೆ.

# ಹೊಸ ವಿನ್ಯಾಸದ ಸುಜುಕಿ ಆಕ್ಸೆಸ್ ಸ್ಕೂಟರ್ ಲೋಕಾರ್ಪಣೆ

### ಹೊಸಪೇಟೆ ಆರ್‌ಟಿಒ ವಸಂತ ಈಶ್ವರ್ ಚೌವ್ಹಾಣ್ ಅವರಿಂದ ಬಿಡುಗಡೆ | 5 ಬಣ್ಣಗಳಲ್ಲಿ ಲಭ್ಯ | ಡಿಜಿಟಲ್ ಇನ್ಸ್ಟ್ರುಮೆಂಟ್ ಕ್ಲಸ್ಟರ್ ವೈವಿಧ್ಯಮಯ ವೈಶಿಷ್ಟ್ಯತೆಗಳೊಂದಿಗೆ ಆರಾಮದಾಯಕ ಪ್ರಯಾಣ ಉತ್ತಮ ಮೈಲೇಜ್‌ಗೆ ಮೆಚ್ಚುಗೆ | ಬ್ಲೂಟೂತ್ ಡ್ಯಾಶ್‌ಬೋರ್ಡ್




ಹೊಸಪೇಟೆಯ ಮುನೀರ್ ಸುಜುಕಿ ಶೋ ರೂಂನಲ್ಲಿ ನೂತನ ಸುಜುಕಿ ಆಕ್ಸೆಸ್ ಸ್ಕೂಟರ್‌ಗಳನ್ನು ಆರ್‌ಟಿಒ ವಸಂತ ಈಶ್ವರ್ ಚೌವ್ಹಾಣ್ ಮಂಗಳವಾರ ಲೋಕಾರ್ಪಣೆಗೊಳಿಸಿದರು.

■ ಹಂಪಿ ಟೈಮ್ಸ್ ಹೊಸಪೇಟೆ

ಗ್ರಾಹಕರ ಬೇಡಿಕೆಗನುಗುಣವಾಗಿ ಸುಜುಕಿ ಆಕ್ಸೆಸ್ ಸ್ಕೂಟರನ್ನು ಸುಜುಕಿ ಮೋಟಾರ್‌ಸೈಕಲ್ ಇಂಡಿಯಾ ಪ್ರೈವೇಟ್ ಲಿ. ಸಂಸ್ಥೆಯು ಸುಜುಕಿ ಇಕೋ ಪರ್ಫಾರ್ಮೆನ್ಸ್ (ಎಸ್‌ಇಪಿ) ತಂತ್ರಜ್ಞಾನದೊಂದಿಗೆ 8.4 ಹಾರ್ಸ್‌ಪವರ್ ಸಹಿತ ನವೀಕರಿಸಿ 5 ಆಕರ್ಷಕ ಬಣ್ಣಗಳಲ್ಲಿ ಬಿಡುಗಡೆಗೊಳಿಸಿದೆ ಎಂದು ಮುನೀರ್ ಗ್ರೂಫ್ ಸಿಇಒ ಸೈಯದ್ ನಾಜ್ಹೀಮುದ್ದೀನ್ ಹೇಳಿದರು.


ನಗರದ ವಿಜಯನಗರ ಕಾಲೇಜ್ ಪಕ್ಕದ 100 ಹಾಸಿಗೆ ಆಸ್ಪತ್ರೆ ರಸ್ತೆ, ಬಸವೇಶ್ವರ ಬಡಾವಣೆ ಯಲ್ಲಿರುವ ಮುನೀರ್ ಸುಜುಕಿ ಶೋ ರೂಂನಲ್ಲಿ ನೂತನ ಸುಜುಕಿ ಆಕ್ಸೆಸ್ ಸ್ಕೂಟರ್ ಬಿಡುಗಡೆ ಕಾಯಕ್ರಮದಲ್ಲಿ ಫೆ.4 ಮಂಗಳವಾರ ಮಾತನಾಡಿದರು. ಸುಜುಕಿ ಆಕ್ಸೆಸ್ ಸ್ಕೂಟರ್ ಉತ್ತಮ ಕಾರ್ಯಕ್ಷಮತೆ, ಆರಾಮ ಮತ್ತು ವಿನ್ಯಾಸಕ್ಕೆ ಗ್ರಾಹಕರಿಂದ ಉತ್ತಮ ಮೆಚ್ಚುಗೆ ಗಳಿಸಿದೆ. ಅತ್ಯಾಕರ್ಷಕ ಡಿಸೈನ್ ಹೊಂದಿದ್ದು, ಪುನರ್ ಆಕೃತೀಕರಿಸಿದ ಡಿ.ಆರ್.ಎಲ್. ಮತ್ತು ಎಲ್‌ಇಡಿ ಹೆಡ್‌ಲೈಟ್ ಮತ್ತು ಕ್ರೋಮ್ ಫನಿಶಿಂಗ್, ಎಲ್.ಇ.ಡಿ ಟೈಲ್‌ಲೈಟ್‌ಗಳನ್ನು ಒಳಗೊಂಡಿದೆ. ಉತ್ತಮ ಮೈಲೇಜ್ ಮತ್ತು ವೇಗ ನೀಡುತ್ತದೆ. ಸೀಟ್ ಎತ್ತದೆ ಇಂಧನ ತುಂಬಲು ಅವಕಾಶ ಕಲ್ಪಿಸಲಾಗಿದೆ. ಹೆಚ್ಚುವರಿ ಸ್ಟೋರೇಜ್ ಗಾಗಿ ಸೀಟ್ ಕೆಳಗೆ 24.4 ಲೀಟರ್‌ನಷ್ಟು ಸಂಗ್ರಹಣ ಸ್ಥಳವಿದೆ. ಹಿಂಬದಿ ಸಸ್ಪೆನ್ಷನ್ ಸುಧಾರಣೆಗೊಳಿಸಲಾಗಿದೆ. ವಿಶೇಷವಾಗಿ




ಪಾಸಿಂಗ್ ಸ್ವಿಚ್, ಹ್ಯಾಜರ್ಡ್ ಸ್ವಿಚ್ ಮತ್ತು ಬ್ರೇಕ್ ಲಾಕ್ ಸೇರಿಸಿದ್ದು ಗ್ರಾಹಕರಿಗೆ ಖುಷಿ ನೀಡಿದೆ. ಡಿಜಿಟಲ್ ಇನ್ಸ್ಟ್ರುಮೆಂಟ್ ಕ್ಲಸ್ಟರ್‌ನಲ್ಲಿ ಬ್ಲೂಟೂತ್ ಸೌಲಭ್ಯವಿರುವ ಡಿಜಿಟಲ್ ಡ್ಯಾಶ್ ಬೋರ್ಡ್, ಸುಜುಕಿ ರೈಡ್ ಕನೆಕ್ಟ್ ಅಪ್ಲಿಕೇಶನ್ ಮೂಲಕ ವೈವಿಧ್ಯಮಯ ವೈಶಿಷ್ಟ್ಯತೆಗಳನ್ನು ಒದಗಿಸಿದೆ. ಕ್ಯಾಲೆಂಡರ್ ಅಲರ್ಟ್, ರೇನ್ ಅಲರ್ಟ್, ಮೈಲೇಜ್, ಸರ್ವೀಸ್ ರಿಮೈಂಡರ್ ಮಾಹಿತಿಯನ್ನು ಹೆಚ್ಚುವರಿಯಾಗಿ ನೀಡಲಾಗಿದೆ. ಗ್ರಾಹಕರ ಅನುಕೂಲಕ್ಕೆ ತಕ್ಕಂತೆ ಸುಜುಕಿ ಅಕ್ಸೆಸ್‌ನ್ನು 3 ರೂಪಗಳಲ್ಲಿದ್ದು ಬೇಸಿಕ್ ಮಾಡೆಲ್, ಸ್ಟ್ಯಾಂಡರ್ಡ್ ಹಾಗೂ ಬ್ಲೂಟೂತ್ ರೂಪಗಳಲ್ಲಿ ಬಿಡುಗಡೆಗೊಳಿಸಲಾಗಿದೆ ಎಂದರು.


ಹೊಸಪೇಟೆ ಆರ್‌ಟಿಒ ವಸಂತ ಈಶ್ವರ್ ಚೌವ್ಹಾಣ್ ಹೊಸ ಸುಜುಕಿ ಆಕ್ಸೆಸ್ ಸ್ಕೂಟರ್‌ಗಳನ್ನು ಬಿಡುಗಡೆಗೊಳಿಸಿ ಮಾತನಾಡಿದರು. ಸುಜುಕಿ ಮೋಟಾರ್‌ಸೈಕಲ್ ಇಂಡಿಯಾ ಪ್ರೈವೇಟ್ ಲಿ. ಸಂಸ್ಥೆಯು ಗ್ರಾಹಕರ ಬೇಡಿಕೆಯನ್ನು ಗಂಭೀರವಾಗಿ ಪರಿಗಣಿಸಿ ಕಾಲಕ್ಕನುಗುಣವಾಗಿ ಸ್ಕೂಟರ್‌ಗಳನ್ನು ನವೀಕರಣಗೊಳಿಸುತ್ತಾ ಬಂದಿದೆ. ಮಾರುಕಟ್ಟೆಯಲ್ಲಿ ತನ್ನದೇ ಆದ ಶ್ರೇಣಿಯನ್ನು ಹೊಂದಿದ್ದು, ಸ್ಮೂತ್ ರೈಡಿಂಗ್ ವಿಷಯದಲ್ಲಿ ಬಳಕೆದಾರರ ವಿಶ್ವಾಸ ಗಳಿಸುವ ಜೊತೆಗೆ ಮೆಚ್ಚುಗೆಗೂ ಪಾತ್ರವಾಗಿದೆ. ವಾಹನ ಸವಾರರು ಸಾರಿಗೆ ನಿಯಮಗಳನ್ನು ಪಾಲಿಸಬೇಕು. ಸಾರಿಗೆ ನಿಯಮಗಳ ಪಾಲನೆಯಿಂದ ಜೀವ ರಕ್ಷಣೆಯ ಜೊತೆಗೆ, ಆರ್ಥಿಕ ಉಳಿತಾಯ, ಉತ್ತಮ ಮೈಲೇಜ್‌ನ್ನು ಪಡೆಯಬಹುದು ಎಂದರು.

ಮುನೀರ್ ಸುಜುಕಿ ನಿರ್ದೇಶಕ ಸೈಯದ್ ಅಮ್ಮಾರ್ ಅಹ್ಮದ್ ಮಾತನಾಡಿ, ಸ್ಕೂಟರ್ ವೈಶಿಷ್ಟ್ಯತೆಗಳ ಕುರಿತು ವಿವರಿಸಿದ ಅವರು, ಸ್ಕೂಟರ್ ಬುಕ್ಕಿಂಗ್ ಮತ್ತು ಮಾಹಿತಿಗಾಗಿ ಮೊ:9900702149, 6366655589 ಸಂಪರ್ಕಿಸಿ ಎಂದರು. ಮುಂಚಿತವಾಗಿ ಬುಕ್ಕಿಂಗ್ ಮಾಡಿದ್ದ ಗ್ರಾಹಕರಿಗೆ ಸ್ಕೂಟರ್ ಹಸ್ತಾಂತರಿಸಿದರು. ಶೋರೂಂ ಸಿಬ್ಬಂದಿ ಉಪಸ್ಥಿತರಿದ್ದರು.



ಸುಜುಕಿ ಆಕ್ಸೆಸ್ ಸ್ಕೂಟರ್ ಎಸ್‌ಇಪಿ ಪರ್ಫಾರ್ಮೆನ್ಸ್ ತಂತ್ರಜ್ಞಾನದೊಂದಿದ್ದು, ಆಕರ್ಷಕ ಡಿಸೈನ್ ಜೊತೆಗೆ ಗ್ರಾಹಕರ ಅಭಿರುಚಿಗೆ ತಕ್ಕಂತೆ ಸುಜುಕಿ ಸಂಸ್ಥೆ ನವೀಕರಿಸಿದೆ. ಬಳಕೆದಾರರು ಸಾರಿಗೆ ನಿಯಮಗಳ ಪಾಲನೆ ಮಾಡಬೇಕು.

– ವಸಂತ ಈಶ್ವರ್ ಚೌವ್ಹಾಣ್ ಆರ್‌ಟಿಒ ಹೊಸಪೇಟೆ



ಸುಜುಕಿ ಆಕ್ಸೆಸ್ ಸ್ಕೂಟರ್ ಗ್ರಾಹಕರ ಬೇಡಿಕೆಗೆ ತಕ್ಕಂತೆ ಹೊಸತನದೊಂದಿಗೆ ಬಿಡುಗಡೆಯಾಗಿದೆ. 3 ವೇರಿಯಂಟ್‌ಗಳಲ್ಲಿ ಲಭ್ಯವಿದ್ದು, ಅಧಿಕ ಮೈಲೇಜ್, ಆರಾಮದಾಯಕ ಪ್ರಯಾಣಕ್ಕೆ ಅತ್ಯುತ್ತಮ ಆಯ್ಕೆಯಾಗಿದೆ.

– ಸೈಯದ್ ನಾಜ್ಹೀಮುದ್ದೀನ್ ಸಿಇಒ ಮುನೀರ್ ಗ್ರೂಫ್,ಹೊಸಪೇಟೆ



ಸುಜುಕಿ ಆಕ್ಸೆಸ್ ಸ್ಕೂಟರ್ ಗ್ರಾಹಕರ ನೆಚ್ಚಿನ ಆಯ್ಕೆಯಾಗಿದೆ. ಆಲ್ ನ್ಯೂ ಆಕ್ಸೆಸ್ ಈಗ ಪಿಕಪ್ ಭಿ, ಮೈಲೇಜ್ ಭೀ, ಶಾಂದರ್ ಕ್ವಾಲಿಟಿ ಕೆ ಸಾಥ್ ಬಿಡುಗಡೆ ಗೊಂಡಿರುವುದು ಗ್ರಾಹಕರಲ್ಲಿ ಹರ್ಷ ತಂದಿದೆ.

– ಸೈಯದ್ ಅಮ್ಮಾರ್ ಅಹ್ಮದ್ ಡೈರೆಕ್ಟರ್ ಮುನೀರ್ ಸುಜುಕಿ,ಹೊಸಪೇಟೆ



# ಮಾಧ್ಯಮ ಅಕಾಡೆಮಿಯಿಂದ ಪ್ರಥಮ ಛಾಯಾಚಿತ್ರ ಸ್ಪರ್ಧೆ ಹಾಗೂ ಪ್ರದರ್ಶನ

■ **ಹಂಪಿ ಟೈಮ್ಸ್ ಹೊಸಪೇಟೆ**

ಕರ್ನಾಟಕ ಮಾಧ್ಯಮ ಅಕಾಡೆಮಿಯು ರಾಜ್ಯದಲ್ಲಿ ಮೊಟ್ಟ ಮೊದಲ ಬಾರಿಗೆ ಕರ್ನಾಟಕದ ಸುದ್ದಿ ಛಾಯಾಚಿತ್ರಗ್ರಾಹಕರಿಗಾಗಿ ರಾಜ್ಯಮಟ್ಟದ ಛಾಯಾಚಿತ್ರ ಸ್ಪರ್ಧೆ ಹಾಗೂ ಪ್ರದರ್ಶನವನ್ನು ಏರ್ಪಡಿಸಿದೆ.

ಈ ಸ್ಪರ್ಧೆಯಲ್ಲಿ ಆಯ್ಕೆಯಾಗುವ ಮೊದಲ ಮೂರು ಛಾಯಾಚಿತ್ರಗಳಿಗೆ ಕ್ರಮವಾಗಿ 35,000/– ರೂ., 25,000/– ರೂ. ಹಾಗೂ 15,000/– ರೂ. ನಗದು ಬಹುಮಾನ ನೀಡಲಾಗುವುದು. ಆಯ್ದ ಅತ್ಯುತ್ತಮ ಛಾಯಾಚಿತ್ರಗಳನ್ನು ಹುಬ್ಬಳ್ಳಿ–ಧಾರವಾಡದಲ್ಲಿ ಮಾರ್ಚ್ ತಿಂಗಳಲ್ಲಿ ಅಕಾಡೆಮಿ ವತಿಯಿಂದ ಏರ್ಪಡಿಸಲಾಗುವ ಸುದ್ದಿ ಛಾಯಾಗ್ರಹಣ ಕುರಿತ ಕಾರ್ಯಾಗಾರದ ಸಂದರ್ಭದಲ್ಲಿ ಛಾಯಾಚಿತ್ರ ಪ್ರದರ್ಶನದಲ್ಲಿ ಇರಿಸಲಾಗುವುದು.

**ಸ್ಪರ್ಧೆಯ ಷರತ್ತುಗಳು:**

ಈ ಸ್ಪರ್ಧೆಗೆ ಪ್ರವೇಶ ಉಚಿತವಾಗಿದ್ದು, ದಿನಾಂಕ: 01–01–2024 ರಿಂದ 31–01–2025 ರ ಅವಧಿಯಲ್ಲಿ ಚಿತ್ರಿಸಿರುವ ಚಿತ್ರಗಳನ್ನು ಮಾತ್ರ ಸ್ಪರ್ಧೆಗೆ ಸ್ವೀಕರಿಸಲಾಗುವುದು. ಪ್ರತಿ ಸುದ್ದಿ ಛಾಯಾಚಿತ್ರ ಗ್ರಾಹಕರು ತಾವೇ ಚಿತ್ರಿಸಿರುವ ಎರಡು ಸುದ್ದಿ ಛಾಯಾಚಿತ್ರಗಳನ್ನು ಮಾತ್ರ ಸ್ಪರ್ಧೆಗೆ ಸಲ್ಲಿಸುವುದು.

ಸುದ್ದಿ ಛಾಯಾಚಿತ್ರಗಳನ್ನು ಚಿತ್ರಿಸಿರುವುದಕ್ಕೆ ಯಾವುದೇ ಭೌಗೋಳಿಕ ಪರಿಮಿತಿ ಇರುವುದಿಲ್ಲ. ಪ್ರತಿ ಸ್ಪರ್ಧಿಯೂ ಅವರು ಸುದ್ದಿ ಛಾಯಾಚಿತ್ರಗ್ರಾಹಕರಾಗಿ ಕಾರ್ಯನಿರ್ವಹಿಸುತ್ತಿರುವ ಪತ್ರಿಕೆಯ ಸಂಪಾದಕರಿಂದ ಕಾರ್ಯನಿರ್ವಹಿಸುತ್ತಿರುವ ಬಗ್ಗೆ ದೃಢೀಕರಣ ಪತ್ರ ಅಥವಾ ಕರ್ನಾಟಕ ಸರ್ಕಾರದ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಪತ್ರಕರ್ತರಿಗಾಗಿ ನೀಡುವ ಅಕ್ರೆಡಿಯೇಷನ್ ಕಾರ್ಡ್ ಹೊಂದಿರುವವರು ಅದರ ದೃಢೀಕೃತ ಪ್ರತಿಯನ್ನು ಕಡ್ಡಾಯವಾಗಿ ಅರ್ಜಿಯೊಂದಿಗೆ ಲಗತ್ತಿಸಬೇಕು.

ಛಾಯಾಚಿತ್ರಗಳ ಮೇಲೆ ಹೆಸರು, ಶೀರ್ಷಿಕೆ ಹಾಗೂ ವಾಟರ್ ಮಾರ್ಕ್‌ಗಳು ಇರಬಾರದು. ಸ್ಪರ್ಧೆಗೆ ಕಳಿಸುವ ಛಾಯಾಚಿತ್ರಗಳ ಅಂದರೆ ಡಿಜಿಟಲ್ ಇಮೇಜ್ ಗಳನ್ನು ಜೆಪಿಇಜಿ ಫಾರ್ಮಟ್ (ಎಕಇಲು ಜಿಡಿಟಚಿಣ) ನಲ್ಲಿ ಮಾತ್ರ ಸಲ್ಲಿಸಬೇಕು.

ಪ್ರದರ್ಶನಕ್ಕೆ ಆಯ್ಕೆಯಾಗುವ ಛಾಯಾಚಿತ್ರಗಳನ್ನು 20"x30" ಅಳತೆಯಲ್ಲಿ ಮುದ್ರಣ ಮಾಡಿಸಬೇಕಾಗಿರುವುದರಿಂದ ನೀವು ಕಳಿಸುವ ಇಮೇಜ್ ಗಳು 20"x 30" ಅಳತೆಯ, 300 ಡಿಪಿಐ (DPI) ನಲ್ಲಿದ್ದು ಕನಿಷ್ಠ 5 ಎಂಬಿ(MB) ಗಾತ್ರದಲ್ಲಿರಬೇಕು. ಮೊಬೈಲ್ ಕ್ಯಾಮೆರಾದಲ್ಲಿ ಚಿತ್ರಿಸಿರುವ ಚಿತ್ರಗಳನ್ನು ಸ್ಪರ್ಧೆಗೆ ಸ್ವೀಕರಿಸಲಾಗುವುದಿಲ್ಲ.

ಸ್ಪರ್ಧೆಯಲ್ಲಿ ಭಾಗವಹಿಸುವ ಸುದ್ದಿ ಛಾಯಾಚಿತ್ರಗಳು ಸಹಜವಾಗಿರಬೇಕು. ಚಿತ್ರದಲ್ಲಿನ ಯಾವುದೇ ಭಾಗವನ್ನು ತೆಗೆಯುವುದಾಗಲಿ ಅಥವಾ ಸೇರಿಸುವುದಾಗಲಿ ಮಾಡಿರಬಾರದು.

ಸ್ಪರ್ಧೆಯಲ್ಲಿ ಭಾಗವಹಿಸುವ ಪ್ರತಿಯೊಬ್ಬ ಛಾಯಾಗ್ರಾಹಕರು mediaacademy.karnataka.gov.in ವೆಬ್‌ಸೈಟ್ ನಲ್ಲಿರುವ ನಿಗದಿತ ಅರ್ಜಿಯನ್ನು ಡೌನ್‌ಲೋಡ್ ಮಾಡಿಕೊಂಡು ಭರ್ತಿಮಾಡಿ, ತಮ್ಮ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರದೊಂದಿಗೆ ಇಮೇಜ್ ಗಳನ್ನು photo.karnatakamediaacademy@gmail.com ಇ–ಮೇಲ್ ವಿಳಾಸಕ್ಕೆ ಫೆ.15 ರಂದು ಸಂಜೆ 5 ಗಂಟೆ ಒಳಗಾಗಿ ಸಲ್ಲಿಸಬೇಕು. ನಂತರ ಬಂದ ಚಿತ್ರಗಳನ್ನು ಸ್ಪರ್ಧೆಗೆ ಪರಿಗಣಿಸಲಾಗುವುದಿಲ್ಲ.

ಸ್ಪರ್ಧೆಗೆ ಬಂದಿರುವ ಛಾಯಾಚಿತ್ರಗಳನ್ನು ಪ್ರಶಸ್ತಿಗೆ ಹಾಗೂ ಪ್ರದರ್ಶನಕ್ಕೆ ಆಯ್ಕೆ ಮಾಡಲು ಸುದ್ದಿ ಛಾಯಾಗ್ರಹಣ ಕ್ಷೇತ್ರದಲ್ಲಿ ಅನುಭವ ಹೊಂದಿರುವ ಮೂವರು ತೀರ್ಪುಗಾರರಿದ್ದು ಅವರು ತೆಗೆದುಕೊಂಡ ತೀರ್ಮಾನವೇ ಅಂತಿಮವಾಗಿರುತ್ತದೆ.

ಪ್ರಶಸ್ತಿಗೆ ಆಯ್ಕೆಯಾದ ಮೂರು ಛಾಯಾಚಿತ್ರಗಳಿಗೆ ಪ್ರಥಮ ಬಹುಮಾನ: ರೂ.35,000, ದ್ವಿತೀಯ ಬಹುಮಾನ: ರೂ.25000 ಹಾಗೂ ತೃತೀಯ ಬಹುಮಾನ: ರೂ.15000 ಗಳನ್ನು ನೀಡಲಾಗುವುದು.

ಹೆಚ್ಚಿನ ಮಾಹಿತಿಗಾಗಿ ಮೊ.9448227768 ಹಾಗೂ 9449245980 ಗೆ ಸಂಪರ್ಕಿಸಬಹುದು ಎಂದು ಕರ್ನಾಟಕ ಮಾಧ್ಯಮ ಅಕಾಡೆಮಿಯ ಕಾರ್ಯದರ್ಶಿ ಸಹನಾ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

### ಬೆಳಕಿನ ಹಾದಿ

ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**–: ಸಂಪಾದಕರು :–**
**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

### ಇಂದು ರಾಷ್ಟ್ರಕವಿ ಜಿಎಸ್ ಶಿವರುದ್ರಪ್ಪ ಅವರ ಜನ್ಮದಿನ

# ಜೀವನವನ್ನು ಉತ್ಕಟವಾಗಿ ಪ್ರೀತಿಸಬೇಕು : ಜಿಎಸ್‌ಎಸ್

ಜಿಎಸ್‌ಎಸ್ ಎಂದೇ ಅಪಾರ ವಿದ್ಯಾರ್ಥಿ ವಲಯದಲ್ಲಿ ಹಾಗೂ ನಾಡಿನಾದ್ಯಂತ ಚಿರಪರಿಚಿತರಾದ ಡಾ. ಜಿ. ಎಸ್. ಶಿವರುದ್ರಪ್ಪ (ಗುಗ್ಗರಿ ಶಾಂತವೀರಪ್ಪ ಶಿವರುದ್ರಪ್ಪ) ಕನ್ನಡದ ರಾಷ್ಟ್ರಕವಿಗಳು. ಹಿರಿಯ ಕವಿಗಳಾದ ಎಂ. ಗೋವಿಂದ ಪೈ ಮತ್ತು ಶ್ರೀ ಕುವೆಂಪು ಅವರ ತರುವಾಯ ಕನ್ನಡಕ್ಕೆ ಮೂರನೆಯ ರಾಷ್ಟ್ರಕವಿ ಪ್ರಶಸ್ತಿಯನ್ನು ತಂದುಕೊಟ್ಟ ಮಹತ್ವದ ಕವಿ, ವಿಮರ್ಶಕ, ಮೀಮಾಂಸಕ,ಪ್ರಾಧ್ಯಾಪಕ ಹಾಗೂ ದಕ್ಷ ಆಡಳಿತಗಾರರು.

ತಂದೆ ಶಾಂತವೀರಪ್ಪ ತಾಯಿ ವೀರಮ್ಮ. ಹುಟ್ಟಿದ್ದು 7 ಫೆಬ್ರವರಿ 1926ರಂದು ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲೂಕಿನ ಈಸೂರು ಎಂಬ ಗ್ರಾಮದಲ್ಲಿ. ಇಂದು ಅವರ 99ನೇ ಜನ್ಮದಿನ. ಈ ಹಿನ್ನೆಲೆಯಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದಲ್ಲಿ 1983–85ರ ಅವಧಿಯಲ್ಲಿ ಅವರ ವಿದ್ಯಾರ್ಥಿಯಾಗಿದ್ದ ನಾನು ನನ್ನ ಕೆಲವು ನೆನಪುಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳಬಯಸುತ್ತೇನೆ.

ನಾನು ಪಿಯುಸಿ, ಬಿಎ ಓದುತ್ತಿದ್ದಾಗಲೇ ಕವಿತೆ ಬರೆಯುವ ಹುಚ್ಚು. ತುಮಕೂರಿನ ನಗರ ಕೇಂದ್ರ ಗ್ರಂಥಾಲಯಕ್ಕೆ ನಿಯತವಾಗಿ ಹೋಗುತ್ತಿದ್ದೆ. ಅಲ್ಲಿ ಕವಿತೆಗಳನ್ನು ಓದುವಾಗ ಒಂದು ಪುಸ್ತಕದ ಹಿಂಬದಿಯಲ್ಲಿ ಚಿನ್ನದ ಕಟ್ಟಿನ ಕನ್ನಡಕ ತೊಟ್ಟ ಹಿರಿಯ ಕವಿಯ ಫೋಟೋ ನೋಡಿ ಅಚ್ಚರಿ ಮತ್ತು ಖುಷಿಯಾಯಿತು. ಪುಟಗಳನ್ನು ತಿರುವಿ ಹಾಕಿದಾಗ ಅದು ಜಿ.ಎಸ್. ಶಿವರುದ್ರಪ್ಪನವರ ಕವನ ಸಂಕಲನವೆಂದು ತಿಳಿಯಿತು. ಜಡೆ, ಸ್ತ್ರೀ, ಮುಂಬೈ ಜಾತಕ, ಎದೆ ತುಂಬಿ ಹಾಡಿದೆನು...

ಮೊದಲಾದ ಕವಿತೆಗಳನ್ನು ಓದುತ್ತಿದ್ದಂತೆ ಅವರನ್ನು ನೋಡಬೇಕೆಂಬ ತೀವ್ರ ಹಂಬಲ, ಆಸೆ ಉಂಟಾದವು. ಅಲ್ಲಿಂದ ಮೊಳಕೆಯೊಡೆದ ನನ್ನ ಬಯಕೆ, ಫಲ ಕೊಟ್ಟಿದ್ದು ಕನ್ನಡ ಎಂಎ.ಗೆ ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿಗೆ ಸೇರಿದಾಗಲೇ. ಆಗ ನನಗೆ ಸಾರ್ಥಕ್ಯದ ಭಾವ ಮೂಡಿತು.

ಬಿಎ ಓದುತ್ತಿದ್ದಾಗ ನಾನು ಇಂಗ್ಲೀಷ್ ನ ರಾಬರ್ಟ್ ಹೆರಿಕ್ ಕವಿಯ 'ಟು ಬ್ಲಾಸಂಸ್ ಮತ್ತು 'ಟು ಡೆಫೋಡಿಲ್ಸ್' ಎಂಬ ಎರಡು ಕವಿತೆಗಳನ್ನು ಬೆಸೆದು "ಹೂಗಳಿಗೆ" ಎಂಬ ಒಂದೇ ಕವಿತೆಯನ್ನು ಭಾವಾನುವಾದ ಮಾಡಿದ್ದೆ. ಬಿ ಎಂ ಶ್ರೀ ಅವರಂತೆ ನಾನೂ ಕೂಡ ಕನ್ನಡ ಮತ್ತು ಇಂಗ್ಲಿಷ್ ಎರಡರಲ್ಲೂ ಪರಿಣತಿಯನ್ನು ಸಾಧಿಸಬೇಕೆಂಬ ಪ್ರೇರಣೆಯೇ ಇದಕ್ಕೆ ಕಾರಣವಾಗಿತ್ತು.

"ಮಧುರ ಮೋಹಕ ಭಾವದೀಪಕ ಮದನ ರೂಪದ ಹೂಗಳೇ,
ಇನಿತು ಮುಂಚೆಯೇ ನಡೆದಿರೇತಕೆ?
ಇಂಥ ಕಾತುರ ತಕ್ಕುದೆ?
ಇನ್ನು ತುಸು ಹೊತ್ತಿರಲೇಬೇಕಿತ್ತಿಲ್ಲಿಯೇ
ನೀವಿರಲೆಬೇಕಿತ್ತಿಲ್ಲಿಯೇ" ಎಂದು ಪ್ರಾರಂಭವಾಗುವ ಕವಿತೆ ನಾಲ್ಕು ಚರಣಗಳೊಂದಿಗೆ ಮುಂದುವರೆದು
"ನಿಲ್ಲಿ ಹೂಗಳೆ ನಿಲ್ಲಿ ಹೂಗಳೆ ನಿಲ್ಲಿ ಹೂಗಳೆ ನಿಲ್ಲಿರಿ.
ಈ ಜಗದ ಸೊಗವನು ಉಂಡು ಹೋಗಿರಿ
ನಿಲ್ಲಿ ಹೂಗಳೆ ನಿಲ್ಲಿರಿ"
ಎಂದು ಮುಕ್ತಾಯವಾಗುತ್ತದೆ. ಈ ಕವಿತೆಯನ್ನು ಅಧ್ಯಯನ ಕೇಂದ್ರದಲ್ಲಿ ಪ್ರತಿ ಶುಕ್ರವಾರ ನಡೆಸುತ್ತಿದ್ದ ಕವಿಗೋಷ್ಠಿಯಲ್ಲಿ ನಾನು ಓದಿದೆ. ಅಧ್ಯಾಪಕರಾದ ಜಿಎಸ್‌ಎಸ್, ಸುಮತಿಂದ್ರ ನಾಡಿಗ, ಚಂದ್ರಶೇಖರ ಕಂಬಾರ, ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ ಮೊದಲಾದವರು ತಮ್ಮ ಕವಿತೆಗಳನ್ನು ವಾಚಿಸುತ್ತಿದ್ದರು. ಜಿಎಸ್ ಎಸ್ ಅವರು ಮಾರನೆಯ ದಿನ ತಮ್ಮ ಚೇಂಬರಿಗೆ ಬರುವಂತೆ ಕರೆದಾಗ ನನಗೆ ಅಲ್ಲಿಗೆ ಹೋಗಲು ಭಯವಾದರೂ ಹೋದೆ. ಜಿಎಸ್‌ಎಸ್ ಅವರು "ನೆನ್ನೆ ಓದಿದ ಕವಿತೆ ಚೆನ್ನಾಗಿದೆ. ಬರೆಯುವುದನ್ನು ಮುಂದು ವರಿಸಿ" ಎಂದರಲ್ಲದೆ ಮುಂದೆ ಒಂದು ಕಾರ್ಯಕ್ರಮದಲ್ಲಿ ಆ ಕವಿತೆಗೆ ವಿಶೇಷ ಬಹುಮಾನದ ಪ್ರಶಸ್ತಿ ಪತ್ರವನ್ನು ನೀಡಿದರು. ಅವರ ಈ ಪ್ರೋತ್ಸಾಹ, ಮೆಚ್ಚುಗೆ ನಾನು ಬರೆವಣಿಗೆಯನ್ನು ಮುಂದುವರೆಸಲು ಪ್ರೇರಣೆಯಾದವು.





ಡಾ.ಬಿ.ಜಿ.ಕನಕೇಶಮೂರ್ತಿ
ವಿಶ್ರಾಂತ ಪ್ರಾಧ್ಯಾಪಕರು

Scan For Digital Colourful
HAMPI TIMES E-paper

ಜಿಎಸ್‌ಎಸ್ ಅವರ ಶಿಸ್ತು, ಸಮಯಪ್ರಜ್ಞೆ ಎಂಥವರನ್ನು ಮಂತ್ರಮುಗ್ಧರನ್ನಾಗಿಸುತ್ತಿತ್ತು. ಅವರು ಧರಿಸುತ್ತಿದ್ದ ಬಿಳಿಯ ಶುಭ್ರ ಉಡುಪು, ನಡೆಯುತ್ತಿದ್ದ ಠೀವಿ, ಗಾಂಭೀರ್ಯ ಎಲ್ಲರಲ್ಲೂ ಗೌರವ ಭಾವನೆಯನ್ನು ಮೂಡಿಸುತ್ತಿದ್ದವು. ಅವರ ತರಗತಿಗಳೆಂದರೆ ಒಂದನ್ನೂ ತಪ್ಪಿಸಿಕೊಳ್ಳುವಂತಿರಲಿಲ್ಲ.ಅಂತಹ ಉದ್ಬೋಧಕವಾದ ಉಪನ್ಯಾಸ. ಅವರು ಮಾಡುತ್ತಿದ್ದ ಪಾಠ "ಕಾವ್ಯ ಮೀಮಾಂಸೆ" ಒಂದು ಗಂಟೆಯ ಪಾಠವನ್ನೇನಾದರೂ ತಪ್ಪಿಸಿಕೊಂಡರೆ ಪಾಠದ ಗ್ರಹಿಕೆಯ ನಡುವೆ ಬಹು ದೊಡ್ಡ ಅಂತರವೇ ಆಗಿಬಿಡುತ್ತಿತ್ತು. ಸ್ವಲ್ಪವೂ ಬೇಸರವಾಗದಂತಹ ಅವರ ಉಪನ್ಯಾಸದ ಶೈಲಿ . "ಭಾರತೀಯ ಕಾವ್ಯ ಪರಂಪರೆಯನ್ನು ಕಾವ್ಯ ಮೀಮಾಂಸಾ ಶಾಸ್ತ್ರವನ್ನು ಕೂಡ ಸೃಜನಶೀಲವಾಗಿ ಮಾಡಿದ್ದರು " ಎಂಬ ಹಿರಿಯ ಸಾಹಿತಿ ಡಾ. ಪ್ರಭುಶಂಕರ ಅವರ ಮಾತುಗಳು ಸತ್ಯಸ್ಯ ಸತ್ಯ.

ಜಿಎಸ್‌ಎಸ್ ಅವರ ಮಾತು ಮತ್ತು ಬರಹದ ಶೈಲಿ ಎರಡೂ ಅಭಿನ್ನ, ಒಂದೇ ಆಗಿವೆ ಎಂಬುದು ಅವರ ತರಗತಿಗಳನ್ನು ಉಪನ್ಯಾಸ ಗಳನ್ನು ಕೇಳಿದ ನನಗೆ ಇಂದಿಗೂ ಅವರ ಬರಹಗಳನ್ನು ಓದುತ್ತಿದ್ದರೆ ಅವರೇ ಮಾತನಾಡು ತ್ತಿದ್ದಾರೇನೋ ಎನಿಸುತ್ತದೆ.

ಅವರು ಕನ್ನಡ ಅಧ್ಯಯನ ಕೇಂದ್ರವನ್ನು ಕಟ್ಟಿದ ರೀತಿ ಅನನ್ಯಾವಾದದು. ಜಿಎಸ್ ಎಸ್ ಅವರೇ ಹೇಳುವಂತೆ "ಭಿನ್ನವಿದ್ದೂ ಬೆರೆಯ ಬಹುದು " ಎಂಬುದನ್ನು ಹೇಳುವ ಮೂಲಕ ಸಾಕಾರ ಗೊಳಿಸಿ ದ್ದಾರೆ. ಬಹುಮುಖ್ಯವಾದ ಒಬ್ಬರ ಚಿಂತನಾಕ್ರಮ ಇನ್ನೊಬ್ಬರ ಚಿಂತನಾಕ್ರಮಕ್ಕೆ ಭಿನ್ನವಾಗಿ ದ್ದರೂ ಒಂದೇ ಕೇಂದ್ರ ದೊಳಗೆ ನವೋದಯ, ಪ್ರಗತಿಶೀಲ, ನವ್ಯ, ಬಂಡಾಯ ಹೀಗೆ ಎಲ್ಲ ಚಳುವಳಿಗಳ ಪಡೆಯನ್ನು ಒಟ್ಟಿಗೆ ಬೆಸೆದ ಸಾಂಸ್ಕೃತಿಕ ಬೆಸುಗೆಯ ಪರಿ ಬಹು ವಿಶಿಷ್ಟವಾದುದು. ಅವರು ತಮ್ಮ ಆಶಯದಂತೆ ಅಧ್ಯಯನ ಕೇಂದ್ರವನ್ನು 'ವಿಮರ್ಶೆಯ ಕೇಂದ್ರ'ವನ್ನಾಗಿಸಿದ್ದಾರೆ.

ಅಧ್ಯಯನ ಕೇಂದ್ರದ ನಿರ್ದೇಶಕರಾಗಿದ್ದ ಸಂದರ್ಭದಲ್ಲಿ ಆಯೋಜಿಸಿದ ಹಲವು ವಿಚಾರ ಸಂಕಿರಣಗಳು, ಗೋಷ್ಠಿಗಳು, ಪ್ರಕಟಿಸಿದ ಕೃತಿಗಳು, ಉದಾಹರಣೆಗೆ ವಿಚಾರ ಸಾಹಿತ್ಯ, ಸಾಹಿತ್ಯ ವಿಮರ್ಶೆಗಳು, ಸಾಹಿತ್ಯ ಚರಿತ್ರೆಗಳು, ವಿವಿಧ ಸಂಕಲನಗಳು ಇದಕ್ಕೆ ಸಾಕ್ಷಿಯಾಗಿವೆ. 1987ರಿಂದ 90ರವರೆಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿ ನಿರ್ವಹಿಸಿದ ಕಾರ್ಯ ಇಂದಿಗೂ ಸ್ಮರಣೀಯವಾಗಿದೆ. ಅವರ ಅವಧಿಯಲ್ಲಿ ಪ್ರಕಟವಾಗುತ್ತಿದ್ದ ನಿಯತಕಾಲಿಕ 'ಅನಿಕೇತನ' ನಿಜವಾದ ಅರ್ಥದಲ್ಲಿ ನಿಯತಕಾಲಿಕವೇ ಆಗಿತ್ತು. 1992 ರಲ್ಲಿ ದಾವಣಗೆರೆಯಲ್ಲಿ ನಡೆದ 61ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರ ಮೆರವಣಿಗೆಯಲ್ಲಿ ಭಾಗವಹಿಸುವುದನ್ನು ನಿರಾಕರಿಸುವುದರ ಮೂಲಕ ಒಂದು ಹೊಸ ಅಧ್ಯಾಯವನ್ನು ಬರೆದವರು ಜಿ ಎಸ್ ಎಸ್. ಅವರು "ಮಗುವಿನ ಮುಗ್ಧತೆ ಹೊಸ ಹೊಳಹಿಗೆ ನಾಂದಿ" ಎನ್ನುವ ಹಾಗೆ ಕುಂಬಾರನ ತಿಗರಿ, ಮಗ್ಗದ ಲಾಳಿ –ಅವರಲ್ಲಿ ಏನೆಲ್ಲಾ ಬೆರಗು, ಕುತೂಹಲವನ್ನುಂಟು ಮಾಡಿವೆ ಎಂಬುದನ್ನು ಅವರ ಅಸಮಗ್ರ ಆತ್ಮಕಥೆ 'ಚತುರಂಗ'ದಲ್ಲಿ ಕಾಣಬಹುದು. ಕುವೆಂಪು, ತೀನಂಶ್ರೀ, ಡಿಎಲ್‌ಎನ್ ಅವರಂತಹ ಮಹಾ ಸಾಧಕರ ಪ್ರೇರಣೆ, ಪ್ರಭಾವಗಳ ಗರಡಿಯಲ್ಲಿ ಪಳಗಿದ ಜಿಎಸ್‌ಎಸ್' ಬರೆದರೆ ಕುವೆಂಪು ಅವರ ಹಾಗೆ ಬರೆಯಬೇಕು, ಮಾತನಾಡಿದರೆ ಕುವೆಂಪು ಅವರಂತೆ ಮಾತನಾಡಬೇಕು' ಎಂಬ ಮಾದರಿ ಮಾರ್ಗವನ್ನು ಕಂಡುಕೊಂಡು ಅಳವಡಿಸಿಕೊಂಡವರು. ಜಿಎಸ್‌ಎಸ್ ಯಾವುದೇ ಒಂದು ಪಂಥಕ್ಕೆ, ಚಳುವಳಿಗೆ ಸೀಮಿತಗೊಳಿಸಿಕೊಂಡವರಲ್ಲ. ನವೋದಯ, ನವ್ಯ, ಪ್ರಗತಿಶೀಲ ಮೊದಲಾದ ಎಲ್ಲ ಪಂಥಗಳ ಸಾರವನ್ನು ಹೀರಿ ಮೈಗೂಡಿಸಿ ಕೊಂಡವರು. ಆದ್ದರಿಂದ ಕೆಲವು ವಿಮರ್ಶಕರು ಅವರನ್ನು "ಸಮನ್ವಯ ಕವಿ" ಎಂದು ಕರೆದಿದ್ದಾರೆ. ವಿಮರ್ಶಕಿ ಎಂಎಸ್ ಆಶಾದೇವಿಯವರು ಹೇಳುವಂತೆ "ಜಿಎಸ್‌ಎಸ್ ಅಖಂಡವಾದ ಜೀವಪ್ರೀತಿಯನ್ನು ಹೊಂದಿದವರು. ಇದು ಅವರ ಎಲ್ಲ ಬರೆವಣಿಗೆಗಳಲ್ಲೂ ವ್ಯಾಪ್ತಗೊಂಡಿದೆ." ಜಿಎಸ್‌ಎಸ್ ಅವರ ಸಾಹಿತ್ಯ ಕೃಷಿ ತುಂಬಾ ಆಳ ಮತ್ತು ವೈಶಾಲ್ಯತೆಯಿಂದ ಕೂಡಿರುವಂಥದ್ದು. ಕಾವ್ಯ, ಕಾವ್ಯಮೀಮಾಂಸೆ, ಸಾಹಿತ್ಯ ವಿಮರ್ಶೆ, ಪ್ರವಾಸ ಸಾಹಿತ್ಯ, ಸಂಪಾದನೆ, ಜೀವನ ಚರಿತ್ರೆ, ಆತ್ಮಚರಿತ್ರೆ, ಮೊದಲಾದ ಎಲ್ಲ ಪ್ರಕಾರಗಳಲ್ಲೂ ಕೃತಿ ರಚನೆ ಮಾಡಿದ್ದಾರೆ. ಸಾಮಗಾನ, ಚೆಲುವು ಒಲವು,ದೇವಶಿಲ್ಪ, ದೀಪದ ಹೆಜ್ಜೆ, ಕಾರ್ತಿಕ, ಅನಾವರಣ, ತೆರೆದ ದಾರಿ, ಗೋಡೆ, ಪ್ರೀತಿ ಇಲ್ಲದ ಮೇಲೆ, ಚಕ್ರಗತಿ, ವ್ಯಕ್ತಮಧ್ಯ ಮೊದಲಾದವು ಕವನ ಸಂಕಲನಗಳಾದರೆ ಪರಿಶೀಲನ, ಸೌಂದರ್ಯ ಸಮೀಕ್ಷೆ, ವಿಮರ್ಶೆಯ ಪೂರ್ವ ಪಶ್ಚಿಮ, ಕಾವ್ಯಾರ್ಥ ಚಿಂತನ, ಗತಿಬಿಂಬ, ಅನುರಣನ, ಕನ್ನಡ ಸಾಹಿತ್ಯ ಸಮೀಕ್ಷೆ, ಕನ್ನಡ ಕವಿಗಳ ಕಾವ್ಯ ಕಲ್ಪನೆ, ಮಹಾಕಾವ್ಯ ಸ್ವರೂಪ, ನವೋದಯ, ಕುವೆಂಪು ಪುನರಾವಲೋಕನ ಮೊದಲಾದವು ವಿಮರ್ಶೆ, ಗದ್ಯಬರಹಗಳಾಗಿವೆ. ಮಾಸ್ಕೋದಲ್ಲಿ 22 ದಿನ, ಅಮೆರಿಕದಲ್ಲಿ ಕನ್ನಡಿಗ, ಇಂಗ್ಲೆಂಡಿನಲ್ಲಿ ಚಾತುರ್ಮಾಸ, ಗಂಗೆಯ ಶಿಖರಗಳಲ್ಲಿ ಪ್ರವಾಸ ಕಥನಗಳಾದರೆ, ಕರ್ಮಯೋಗಿ ಎಂಬುದು ಸಿದ್ಧರಾಮನ ಜೀವನ ಚರಿತ್ರೆಯಾಗಿದೆ. ಕರ್ನಾಟಕ ಸರ್ಕಾರ ಅವರ ಸಮಗ್ರ ಕೃತಿಗಳನ್ನು ಒಂಬತ್ತು ಸಂಪುಟಗಳಲ್ಲಿ ಪ್ರಕಟ ಮಾಡಿದೆ.

ಜಿಎಸ್‌ಎಸ್ ಅವರಿಗೆ ಸಂದ ಪ್ರಶಸ್ತಿ, ಪುರಸ್ಕಾರಗಳು ಹಲವು. ಸೋವಿಯಟ್ ಲ್ಯಾಂಡ್ ನೆಹರು ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆ ಮಿಯ ಗೌರವ ಪ್ರಶಸ್ತಿ , ಕರ್ನಾಟಕ ರಾಜ್ಯೋತ್ಸವ ಪುರಸ್ಕಾರ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ನೃಪತುಂಗ ಪ್ರಶಸ್ತಿ, ಪಂಪ ಪ್ರಶಸ್ತಿ, ಮೈಸೂರು, ಬೆಂಗಳೂರು ಹಾಗೂ ಕುವೆಂಪು ವಿಶ್ವವಿದ್ಯಾ ಲಯಗಳ ಗೌರವ ಡಿ.ಲಿಟ್ ಪ್ರಶಸ್ತಿಗಳು, ಹಂಪಿ ಕನ್ನಡ ವಿಶ್ವವಿದ್ಯಾ ಲಯದ ನಾಡೋಜ ಪ್ರಶಸ್ತಿ ಮೊದಲಾದ ದೊಡ್ಡಪಟ್ಟಿಯೇ ಇದೆ.

ಜಿಎಸ್‌ಎಸ್ ಅವರನ್ನು ಕುರಿತು ಹಲವು ಅಭಿಮಾನಿಗಳು ಗೌರವ, ಅಭಿನಂದನ ಗ್ರಂಥಗಳನ್ನು ಹೊರತಂದಿದ್ದಾರೆ. ಅವುಗಳಲ್ಲಿ ಸ್ನೇಹ ಕಾರ್ತಿಕ, ಹಣತೆ, ಗೌರವ ಮೊದಲಾದ ಪ್ರಮುಖವಾದವು. ಹಿರಿಯ ಸಾಹಿತಿ ಎಚ್‌ಎಸ್ ವೆಂಕಟೇಶಮೂರ್ತಿಯವರು ಜಿ.ಎಸ್. ಶಿವ ರುದ್ರಪ್ಪ ಎಂಬ ಜೀವನ ಚರಿತ್ರೆಯನ್ನು ರಚಿಸಿದ್ದಾರೆ. ಕನ್ನಡ ನಾಡು ನುಡಿಯ ಏಳ್ಗೆಗೆ "ತೇರಳೆವರು ನಾವು ಎಲ್ಲಿದ್ದರೇನು?
ಬೊಂಬಾಯಿ, ಮದರಾಸು, ಕಲ್ಕತ್ತಾ, ಡೆಲ್ಲಿ, ಎಲ್ಲೆಂದರಲ್ಲಿ..."ಎಂದು ನಾವು ನಿಂತ ನೆಲೆಗಳಿಂದಲೇ ಕನ್ನಡದ ಸೇವೆಗೆ ಕಟಿಬದ್ಧರಾಗಬೇಕೆಂದು ಕರೆಕೊಟ್ಟವರು.

"ಪ್ರೀತಿ ಇಲ್ಲದ ಮೇಲೆ ಹೂವು ಅರಳಿತು ಹೇಗೆ?"
ಎನ್ನುವಲ್ಲಿ ಮನುಷ್ಯ ಸಂಬಂಧಗಳು ಬೆಸೆದು ಗಟ್ಟಿಯಾಗಬೇಕೆನ್ನುತ್ತಾರೆ. ಅಂತೆಯೇ "ಹಣತೆ ಹಚ್ಚುತ್ತೇನೆ ನಾನು, ಈ ಕತ್ತಲೆಯನ್ನು ದಾಟುತ್ತೇನೆಂಬ ಭ್ರಮೆಯಿಂದಲ್ಲ, ಇರುವಷ್ಟು ಹೊತ್ತು ನನ್ನ ಮುಖ ನೀನು, ನಿನ್ನ ಮುಖ ನಾನು ನೋಡಬಹುದೆಂಬ ಒಂದೇ ಒಂದು ಆಸೆಯಿಂದ, ಹಣತೆ ಆರಿದ ಮೇಲೆ ಮತ್ತೆ ನಾನು ಯಾರೋ ನೀನು ಯಾರೋ" ಎಂಬ ಸಾಲುಗಳು ಕವಿಯ ತಾತ್ವಿಕ ನೆಲೆಯನ್ನು, ಜೀವನ ದರ್ಶನ, ಕಾವ್ಯ ರಚನೆಯ ಆಶಯಗಳನ್ನು ಸೂಚಿಸುತ್ತವೆ.

"ಇಂದಿನ ಯುವಕರು ಜೀವನವನ್ನು ಉತ್ಕಟವಾಗಿ ಪ್ರೀತಿಸಬೇಕು. ಸಮಾಜದ ಬಗ್ಗೆ ಎಚ್ಚರವಿರಲಿ. ಯಾವುದೇ ಆಸೆ ಆಮಿಷಗಳಿಗೆ ಬಲಿಯಾಗದೆ ಗಂಭೀರವಾದ ಸಾಹಿತ್ಯದ ಚಿಂತನೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬೇಕು"– ಎಂಬ ಜಿಎಸ್‌ಎಸ್ ಅವರ ಮಾತುಗಳು ಎಂದೆಂದಿಗೂ ಪ್ರಸ್ತುತವಾಗಿವೆ.

# ರೇಷ್ಮೆ ನೂಲಿನಂತಿಹುದು ಸಂಬಂಧ!

ಸಂಬಂಧ' ವೆನ್ನುವುದು ಆಡಂಭರಗಳಿಲ್ಲದ ಸೂಕ್ಷ್ಮ ಸಂವೇದನೆಯಲ್ಲಿ ತಂಪನ್ನು ನೀಡುವ ನೀರಿನಂತಿರಬೇಕು. ಸಂಬಂಧ ಎಂದಾಕ್ಷಣ ಒಡಹುಟ್ಟಿದ, ಸಾಕಿ ಸಲಹಿದ, ಹಿರಿ–ಕಿರಿಯ ಬಳಗವೆಲ್ಲಾ ನಮ್ಮ ಕಣ್ಣಮುಂದೆ ಬರುತ್ತದೆ. ಇಲ್ಲಿ ಎಲ್ಲರೂ ನಮ್ಮವರೆ. ಕಷ್ಟ–ನಷ್ಟ–ಇಷ್ಟಗಳಿಗೆಲ್ಲಾ ಸ್ಪಂಧಿಸುವವರೆ. ಕೆಲವೊಂದು ಇತಿ–ಮಿತಿಗಳ ಚೌಕಟ್ಟಿನಲ್ಲಿರುವ ಸಂಬಂಧದ ಪ್ರೀತಿಯ ಎಳೆಯನ್ನು ಜಾಗುರೂಕತೆಯಿಂದ ನಾಜೂಕಾಗಿ ಎಳೆದಾಡ ಬೇಕು. ಭಾರೀ ಶಕ್ತಿ ಪ್ರದರ್ಶಿಸಿದರೆ ಪ್ರೀತಿಯ ಎಳೆ ತುಂಡಾಗುತ್ತದೆ. ಯಾವುದೂ ಅತಿ–ಮಿತಿಯಾಗದೇ ಕಥೆಯಾಗಿ ಫಜೀತಿಗೊಳಗಾಗದೇ ತಾಳ್ಮೆ, ತ್ಯಾಗ, ಶಾಂತಿ, ಸಮಾಧಾನದಿಂದ ನಡೆದುಕೊಳ್ಳಬೇಕು.



ಡಾ. ರಾಜಶೇಖರ ಜಮದಂಡಿ,
ಲೇಖಕರು ಮೊ: 9448441471

Scan For Digital Colourful
HAMPI TIMES E-paper

ಕೆಲವೊಮ್ಮೆ ಸಂಬಂಧಗಳಲ್ಲಿ ಮನಸ್ತಾಪಗಳಾಗಬಹುದು. ಅಂದರೆ ಉಗುರು ಬೆಳೆದಾಗ ಅದನ್ನು ಕತ್ತರಿಸಿಕೊಳ್ಳುತ್ತೇವೆಯೋ ಹೊರತು ಬೆರಳನ್ನಲ್ಲ. ತಲೆಗೂದಲು ಬೆಳೆದಾಗ ಕತ್ತರಿಸಿಕೊಳ್ಳುತ್ತೇವೆಯೋ ಹೊರತು ತಲೆಯನ್ನಲ್ಲ. ಸಿಟ್ಟು ಬಂದಾಗ ನುಂಗಿಕೊಳ್ಳಬೇಕೇ ವಿನಃ ಸಂಬಂಧ ಕಳೆದುಕೊಳ್ಳುವುದಿಲ್ಲ. ಜನಪದರು ಹೇಳುವಂತೆ "ನನ್ನದು, ನಾನು, ನನ್ನಿಂದ ಎಂಬ ಅಹಂಕಾರದ ಮನೋಭಾವ ಸಂಬಂಧದಲ್ಲಿ ಸಲ್ಲದು. 'ನಾನು' ಎಂಬುದು ಕ್ಷಣಿಕ. 'ನೀನು' ಎಂಬುದೇ ಮಾರ್ಮಿಕ". ಸಂಬಂಧಗಳಲ್ಲಿ ಒಬ್ಬರಿಗೊಬ್ಬರು ಕಷ್ಟ–ನಷ್ಟ–ನೋವು ಹಂಚಿಕೊಳ್ಳುವುದು ಸಹಜ. ಇವೆಲ್ಲ ಈರುಳ್ಳಿ ಪದರಗಳಿದ್ದಂತೆ. ಪ್ರತಿ ಪದರ ಕೀಳುವಾಗಲೂ ಕಣ್ಣೀರು ಬರುತ್ತದೆ ಅವೆಲ್ಲ ಕ್ಷಣಿಕ.



ಆತ್ಮೀಯತೆ ಹೊಂದಿದ ಸಂಬಂಧಗಳಲ್ಲಿ ಒಂದು ಮಾತು ಕಡಿಮೆಯಾಡಿದರೆ ತಪ್ಪಿಲ್ಲ. ಆದರೆ ಒಂದು ಮಾತು ಹೆಚ್ಚು ಆಡಿದರೆ ಹೋಯಿತು. ಮಾತಾಡುವಾಗ ನಾಲಗೆ ಮೇಲೆ ಹಿಡಿತವಿದ್ದರೆ ಚೆಂದ. ಸಂಬಂಧಗಳಲ್ಲಿ ಸಹಾನುಭೂತಿ ಮುಖ್ಯ. ಯಾರೇ ಸುಖ–ದುಃಖದಲ್ಲಿದ್ದರೆ ಸಮಾಧಾನ ಹೇಳುವ ಸಹಾಯದ ಹಸ್ತ ಇರಬೇಕು. ಸಂಬಂಧಗಳಲ್ಲಿ ಹೃದಯದ ಕದ ತಟ್ಟಿದವರ ಭಾವನೆಗಳನ್ನು ಗೌರವಿಸಿ. ಏಕೆಂದರೆ ಯಾವಾಗ ನಿಮ್ಮನ್ನು ಬಿಟ್ಟು ದೂರ ಹೋಗುತ್ತಾರೋ ಗೊತ್ತಿಲ್ಲ.

ಈಚೆಗೆ ಭಾರತದಲ್ಲಿ ಅವಿಭಕ್ತ ಕುಟುಂಬಗಳು ಕ್ರಮೇಣ ಮಾಯವಾಗುತ್ತಾ ವಿಭಕ್ತ ಕುಟುಂಬಗಳು ಹೆಚ್ಚಾಗಿವೆ. ಅವಿಭಕ್ತ ಕುಟುಂಬದಲ್ಲಿ ಹಿರಿಯರಿಂದ ಕಿರಿಯರಿಗೆ ಸಂಸ್ಕೃತಿ, ಸಂಸ್ಕಾರ, ರಕ್ಷಣೆ, ಮಾರ್ಗದರ್ಶನವಿರುತ್ತದೆ. ಕುಟುಂಬದಲ್ಲಿ ಸಂಬಂಧಗಳು ಗಟ್ಟಿಯಾಗಿರುವ ಅನುಭವ ಮಕ್ಕಳಲ್ಲಿ ಕಂಡುಬರುತ್ತದೆ. ಕೀಳಿರಿಮೆ ದೂರವಾಗಿ ಹಿರಿಯರಲ್ಲಿ, ದೇವರಲ್ಲಿ ಭಕ್ತಿಭಾವ ಹೆಚ್ಚಾಗುತ್ತದೆ. ಪೂಜೆ, ಪ್ರಾರ್ಥನೆ, ಶಿಸ್ತು, ಸಂಯಮ, ಸಹಾಯ ಮುಂತಾದ ಸದ್ಗುಣಗಳು ಸಹಜವಾಗಿ ಮೂಡುತ್ತವೆ. ಇದರಿಂದ ಮಕ್ಕಳ ವ್ಯಕ್ತಿತ್ವವೂ ವಿಕಾಸವಾಗುತ್ತದೆ. ಸಣ್ಣ ಕುಟುಂಬಗಳಲ್ಲಿ ಇಂತಹ ಸೌಲಭ್ಯ ಕಡಿಮೆ. ಮಾನಸಿಕ ಹಾಗೂ ಸಾಮಾಜಿಕ ಒತ್ತಡಗಳು ಹೆಚ್ಚಾಗಿರುತ್ತವೆ. ಅವಿಭಕ್ತ ಕುಟುಂಬದಲ್ಲಿ ಪಾಲಿಗೆ ಬಂದ ಕೆಲಸವಿದ್ದರೆ ಬೇರೆಯವರು ಮಾಡಬಹುದೆಂಬ ಯೋಚನೆ ಇರಲ್ಲ. ನಮಗಾಗಿರುವ ಕೆಲಸಕ್ಕೆ ಕುಂಟು ನೆಪ ಹೇಳಲಾಗುವುದಿಲ್ಲ.

ಈಚೆಗೆ ಆಧುನಿಕ ಶಿಕ್ಷಣ ಪಡೆದಂತೆ ವಸ್ತು ವಿಷಯದ ಆಯ್ಕೆಯಲ್ಲಿ ಆಕರ್ಷಣೆ, ಭಿನ್ನತೆ ಹೆಚ್ಚಾಗಿ ಸಂಬಂಧದಲ್ಲಿ ಸೂಕ್ಷ್ಮವಾದ ಬಿರುಕುಗಳು ಆರಂಭವಾಗಿವೆ. ಇಂದಿನ ಶಿಕ್ಷಣ ಯೋಗಕಿಂತ ಭೋಗಕ್ಕೆ ಅಡಿಪಾಯವಾಗಿ ಕೇವಲ ಸಂಪತ್ತನ್ನು ಸಂಪಾದಿಸುವುದೇ ಗುರಿಯಾಗಿದೆ. ತಂದೆ– ತಾಯಿಗಳು ಮಕ್ಕಳ ವಿಚಾರದಲ್ಲಿ ಅವರ ಅಭಿರುಚಿ ಗಮನಿಸ ಬೇಕು. ಮನೆಯಲ್ಲಿ ಪ್ರೀತಿ, ವಿಶ್ವಾಸದ ವಾತಾವರಣ ನಿರ್ಮಿಸಿ ಪ್ರೋತ್ಸಾಹ ನೀಡಬೇಕು. ಅವರಲ್ಲಿ ಹುದುಗಿರುವ ಸುಪ್ತ ಪ್ರತಿಭೆ ಅರಳಲು ಸಾಧ್ಯ. ವಯಸ್ಸಾದ ತಂದೆ–ತಾಯಿಗಳನ್ನು ಅಂತ್ಯ ಕಾಲದಲ್ಲಿ ಅಕ್ಕರೆಯಿಂದ ಸೇವೆ ಮಾಡಿದರೆ ಅವರ ಮನಸ್ಸಿಗೂ ಸಮಾಧಾನ ವಾಗುತ್ತದೆ.

ಇಂದು ಕೇವಲ ಪತಿಪತ್ನಿ ಮಕ್ಕಳು ಮಾತ್ರ ಜೀವನದ ಪ್ರತಿಕ್ರಿಯೆ ಮುಖ್ಯವೆಂದುಕೊಂಡರೆ, ಸಾಕಿ ಸಲಹಿದವರು ದೂರವಾಗುತ್ತಾರೆ. ಮಕ್ಕಳನ್ನು ವಸತಿ ಶಾಲೆಗಳಿಗೆ, ವೃದ್ಧರನ್ನು ವೃದ್ಧಾಶ್ರಮಕ್ಕೆ ಕಳುಹಿಸುವ ಪಾಶ್ಚಾತ್ಯ ಸಂಸ್ಕೃತಿ ನಮ್ಮಲ್ಲಿ ಹೆಚ್ಚಾಗಿದೆ. ಇದರಿಂದ ರಕ್ತ ಸಂಬಂಧಗಳು ದೂರವಾಗ ತೊಡಗಿವೆ. ಒಟ್ಟಾರೆ ಈಗಿರುವ ಸಂಬಂಧಗಳನ್ನಾದರೂ ಪ್ರೀತಿಯಿಂದ ಕಾಪಾಡಿಕೊಳ್ಳೋಣ. ಉತ್ತಮ ಸಮಾಜಕ್ಕೆ ಮಾನವೀಯ ಸಂಬಂಧಗಳೇ ಅಡಿಪಾಯವೆನ್ನೋಣ.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

# ಉನ್ನತ ಶಿಕ್ಷಣ ಸಚಿವರ ಸಮಾವೇಶ – 2025 ಸಿಎಂ ಸಿದ್ದರಾಮಯ್ಯ ಭಾಷಣ ಹೈಲೈಟ್ಸ್



**1**. ಒಕ್ಕೂಟ ವ್ಯವಸ್ಥೆಯಲ್ಲಿ ರಾಜ್ಯಗಳ ಸ್ವಾಯತ್ತತೆ ಹಾಗೂ ಅಧಿಕಾರದ ಮೇಲೆ ಯುಜಿಸಿ ನಿಯಮಗಳ ಸ್ವರೂಪ ಮತ್ತು ಪರಿಣಾಮಗಳ ಕುರಿತು ಚರ್ಚಿಸಲು ರಾಜ್ಯಗಳು ಮುಂದಾಗಿರುವುದು ಸಮಾವೇಶದ ಪ್ರಾಮುಖ್ಯತೆಯನ್ನು ಒತ್ತಿ ಹೇಳುತ್ತದೆ.

**2**. ದೇಶದ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಈ ಸಮಾವೇಶವು ಪ್ರಮುಖ ಮೈಲಿಗಲ್ಲಾಗಲಿದೆ ಎಂದು ನಾನು ಭಾವಿಸಿದ್ದೇನೆ.

**3**. ಯಾವುದೇ ರಾಷ್ಟ್ರದ ಪ್ರಗತಿ ಮತ್ತು ಸಮೃದ್ಧಿಗೆ ಶಿಕ್ಷಣ ಪ್ರಮುಖ ಪಾತ್ರ ವಹಿಸುತ್ತದೆ. ಸಮಾಜದ ಮೂಲ ಸ್ತಂಭವಾಗಿರುವ ಉನ್ನತ ಶಿಕ್ಷಣ, ಆರ್ಥಿಕ ಬೆಳವಣಿಗೆ, ಸ್ಪರ್ಧೆ ಮತ್ತು ಜ್ಞಾನವನ್ನು ವೃದ್ಧಿಸುತ್ತದೆ. ವಿಶ್ವವಿದ್ಯಾಲಯಗಳು ಮತ್ತು ಉನ್ನತ ಶಿಕ್ಷಣ ಸಂಸ್ಥೆಗಳು ಕೆಲಸಕ್ಕೆ ಯೋಗ್ಯವಾಗಿರುವ ಹಾಗೂ ಇಂದಿನ ಬದಲಾಗುತ್ತಿರುವ ಸಮಾಜದಲ್ಲಿ ಅಗತ್ಯವಿರುವ ಕೌಶಲ್ಯಗಳನ್ನು ಹೊಂದಿರುವ ಪದವೀಧರರನ್ನು ರೂಪಿಸಲು ಅವಶ್ಯಕವಾಗಿವೆ. ವಿಮರ್ಶಾತ್ಮಕ ಯೋಚನಾ ಕೌಶಲ್ಯವನ್ನು ಬೆಳೆಸಲು ಹಾಗೂ ತಮ್ಮ ಕ್ಷೇತ್ರದ ತಜ್ಞರಿಂದ ಕಲಿತುಕೊಳ್ಳಲು ಇವು ಅವಕಾಶ ಕಲ್ಪಿಸುತ್ತವೆ.

**4**. ಭಾರತದ ಶೈಕ್ಷಣಿಕ ಕ್ಷೇತ್ರದಲ್ಲಿ ಕರ್ನಾಟಕ ಪ್ರಮುಖ ಪಾತ್ರವನ್ನು ವಹಿಸಿದೆ. ಕಳೆದ 20 ವರ್ಷಗಳಲ್ಲಿ 76 ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಿದ್ದು (ಸರ್ಕಾರಿ, ಖಾಸಗಿ ಮತ್ತು ಡೀಮ್ಡ್–ಟು–ಬಿ) ವಿವಿಧ ಅಧ್ಯಯನ ವಿಭಾಗಗಳಲ್ಲಿ ಪದವಿ, ಸ್ನಾತಕೋತ್ತರ ಮತ್ತು ಸಂಶೋಧನಾ ಪದವಿಗಳನ್ನು 4,400 ಕಾಲೇಜುಗಳು ಒದಗಿಸುತ್ತವೆ. ಉನ್ನತ ಶಿಕ್ಷಣದ ಪರಿಸರದ ವ್ಯವಸ್ಥೆಯನ್ನು ವಿಸ್ತರಿಸಿ ಹಾಗೂ ಅಭಿವೃದ್ಧಿಗೊಳಿಸಿ ಸಮಾಜದ ಎಲ್ಲಾ ವರ್ಗಗಳಿಗೂ ಉನ್ನತ ಶಿಕ್ಷಣಕ್ಕೆ ಪ್ರಜಾಸತ್ತಾತ್ಮಕ ಪ್ರವೇಶವನ್ನು ದೊರಕಿಸಲು ಕರ್ನಾಟಕ ಸರ್ಕಾರ ಬದ್ಧವಾಗಿದೆ. ಕರ್ನಾಟಕ ರಾಜ್ಯವು ಉನ್ನತ ಶಿಕ್ಷಣದಲ್ಲಿ ಶೇಕಡಾ 36.20 ರಷ್ಟು ಜಿಇಆರ್ ಹೊಂದಿದ್ದು, ಶೇ 28.40 ರಷ್ಟಿರುವ ರಾಷ್ಟ್ರದ ಜಿಇಆರ್ ಬೆಳವಣಿಗೆಗೆ ಮಹತ್ವದ ಕೊಡುಗೆಯನ್ನು ನೀಡಿದೆ. ತನ್ಮೂಲಕ, ಹಲವಾರು ಸವಾಲುಗಳ ನಡುವೆಯೂ ಕರ್ನಾಟಕ ಒಳಗೊಳ್ಳುವ ಹಾಗೂ ಉನ್ನತ ಗುಣಮಟ್ಟದ ಶಿಕ್ಷಣ ಪಥದತ್ತ ಕರ್ನಾಟಕ ಹೆಜ್ಜೆಯಿಟ್ಟಿದೆ.

**5**. ಕರಡು ಯುಜಿಸಿ ನಿಯಮಗಳು, 2025 ಕುರಿತು ಕುಲಪತಿಗಳ ನೇಮಕಾತಿ: ವಿಶ್ವವಿದ್ಯಾಲಯಗಳ ಕುಲಪತಿಗಳು ಶಿಕ್ಷಣ ಮತ್ತು ಆಡಳಿತಾತ್ಮಕ ನಾಯಕರಾಗಿದ್ದು ವಿಶ್ವವಿದ್ಯಾಲಯದ ಆಗುಹೋಗುಗಳ ಜವಾಬ್ದಾರಿ ಅವರ ಮೇಲಿರುತ್ತದೆ. ಎಲ್ಲಾ ಹಂತಗಳಲ್ಲಿ ಪಾರದರ್ಶಕವಾಗಿ ಹಾಗೂ ತನ್ನ ಗುರುತನ್ನು ಎತ್ತಿಹಿಡಿಯುತ್ತಾರೆ.

**6**. ಕುಲಪತಿಗಳ ನೇಮಕಾತಿಯಲ್ಲಿ ರಾಜ್ಯಕ್ಕೆ ಹೆಚ್ಚಿನ ಜವಾಬ್ದಾರಿ ಹಾಗೂ ಉತ್ತರದಾಯಿತ್ವವಿರುತ್ತದೆ. ಕೇಂದ್ರ ಮತ್ತು ರಾಜ್ಯಗಳ ನಡುವಿನ ಸಂಬಂಧಗಳ ಬಗ್ಗೆ ಸರ್ಕಾರಿಯಾ ಆಯೋಗವು (1983–88) ಮಾಡಿರುವ ಕೆಲವು ಅಂಶಗಳೆಂದರೆ, ಕುಲಪತಿಗಳಾಗಿ ರಾಜ್ಯಪಾಲರ ಪಾತ್ರವು ಶಾಸನಬದ್ಧವಲ್ಲ, ಸಾಂವಿಧಾನಕವಲ್ಲ ಮತ್ತು ರಾಜ್ಯ ಕಾನೂನುಗಳ ಪ್ರಕಾರ ವ್ಯಾಖ್ಯಾನ ಮಾಡಬೇಕು ಎಂದು ತಿಳಿಸಿರುವುದು ಗಮನಾರ್ಹ.

**7**. ವಿಶ್ವದ್ಯಾಲಯದ ವಿಷಯಗಳಲ್ಲಿ ರಾಜ್ಯಪಾಲರು ಸ್ವತಂತ್ರ ತೀರ್ಪನ್ನು ಉಳಿಸಿಕೊಳ್ಳುತ್ತಲೇ ಮುಖ್ಯಮಂತ್ರಿಗಳೊಂದಿಗೆ ಸಮಾಲೋಚಿಸಬೇಕೆಂದು ಶಿಫಾರಸ್ಸು ಮಾಡಿದೆ. ಸಂವಿಧಾನದ ಕಾರ್ಯಶೀಲತೆಯನ್ನು ಪರಿಶೀಲಿಸಲು (2000–02) ನ್ಯಾಯಮೂರ್ತಿ ಎಂ.ಎನ್.ವೆಂಕಟಾಚಲಯ್ಯ ಅವರ ನೇತೃತ್ವದ ರಾಷ್ಟ್ರೀಯ ಆಯೋಗವು ಕೂಡ ರಾಜಕೀಯ ತಟಸ್ಥತೆಯನ್ನು ಶಿಫಾರಸ್ಸು ಮಾಡಿದೆಯಲ್ಲದೆ, ಕುಲಪತಿಗಳ ಕಾರ್ಯಗಳ ಬಗ್ಗೆ ಸ್ಪಷ್ಟ ವ್ಯಾಖ್ಯಾನವನ್ನು ನೀಡಿದೆ. ಅಧಿಕಾರಯುತ ಪಾತ್ರಕ್ಕಿಂತ ನೆರವು ನೀಡುವ ಹಾಗೂ ವಿಶ್ವವಿದ್ಯಾಲಯಗಳ ಸ್ವಾಯತ್ತತೆಯನ್ನು ಹೆಚ್ಚಿಸುವುದನ್ನು ಶಿಫಾರಸ್ಸು ಮಾಡಲಾಗಿದೆ.

**8**. ಕೇಂದ್ರ ಮತ್ತು ರಾಜ್ಯಗಳ ಸಂಬಂಧದ ಬಗ್ಗೆ ಎಂ.ಎಂ. ಪುಂಚಿ ಆಯೋಗವು (2007–10) ರಾಜ್ಯಪಾಲರ ಕಚೇರಿಯ ಘನತೆಯನ್ನು ಕಾಪಾಡಲು ರಾಜ್ಯಪಾಲರು ಸಾಂವಿಧಾನಾತ್ಮಕ ಹೊಣೆಗಳ ಮೇಲೆ ಗಮನವನ್ನು ಕೇಂದ್ರೀಕರಿಸಬೇಕು ಎಂದು ಶಿಫಾರಸ್ಸು ಮಾಡಿದೆ.

**9**. ರಾಜ್ಯ ಸರ್ಕಾರವು ಯುಜಿಸಿ ನಿಯಮಗಳು–2025 ಅನ್ನು ಎಚ್ಚರಿಕೆಯಿಂದ ಪರಿಶೀಲಿಸಿದೆ. ಉದ್ಯಮ ರಂಗ ಪರಿಣಿತರು, ನೀತಿ ನಿರೂಪಣೆಯಲ್ಲಿ ಕೆಲಸ ಮಾಡಿದವರು ಮತ್ತು ಸರ್ಕಾರಿ ಸ್ವಾಮ್ಯದ ಸಂಸ್ಥೆಗಳ ಹಿರಿಯ ಅಧಿಕಾರಿಗಳು (ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅರ್ಹತೆ ಇಲ್ಲದಿದ್ದರೂ, ಶೈಕ್ಷಣಿಕ ಆಡಳಿತದೊಂದಿಗೆ ಉನ್ನತ ಶಿಕ್ಷಣ ಮಟ್ಟದಲ್ಲಿ ಸಾಕಷ್ಟು ವರ್ಷಗಳ ಅನುಭವವುಳ್ಳವರನ್ನು) ವಿಶ್ವವಿದ್ಯಾಲಯಗಳ ಕುಲಪತಿಗಳಾಗಿ ನೇಮಕ ಮಾಡಲು ಯುಜಿಸಿ ಅವಕಾಶ ಕಲ್ಪಿಸಿದೆ. ಈ ಅವಕಾಶವನ್ನು ಗಂಭೀರವಾಗಿ ಮರುಪರಿಶೀಲಿಸಬೇಕಾದ ಅಗತ್ಯವಿದೆ.

**10**. ಕುಲಪತಿಗಳ ನೇಮಕಾತಿಗಾಗಿ ಹುಡುಕಾಟ ಮತ್ತು ಆಯ್ಕೆ ಸಮಿತಿಯ ರಚನೆ ಹಾಗೂ ಸಂಯೋಜನೆ:
ಪ್ರಾರಂಭದಿಂದಲೂ, ಹುಡುಕಾಟ ಮತ್ತು ಆಯ್ಕೆ ಸಮಿತಿಗಳನ್ನು ರಾಜ್ಯ ಸರ್ಕಾರ, ಯುಜಿಸಿ, ಕುಲಪತಿ ಮತ್ತು ಸಂಬಂಧಪಟ್ಟ ವಿಶ್ವವಿದ್ಯಾಲಯದ ವತಿಯಿಂದ ನಾಮನಿರ್ದೇಶಿತಗೊಂಡ ಹೆಸರುಗಳನ್ನು ಕುಲಪತಿಗಳ ಆಯ್ಕೆಗಾಗಿ ಶಿಫಾರಸ್ಸು ಮಾಡಲಾಗುತಿತ್ತು. ಆದರೆ 2025ರ ಕರಡು ಯುಜಿಸಿ ನಿಯಮಗಳಲ್ಲಿ ಶಿಕ್ಷಣ ಸಮಕಾಲೀನ ಪಟ್ಟಿಯಲ್ಲಿ ವಿಷಯವಾಗಿದ್ದರೂ ಕುಲಪತಿಗಳ ನೇಮಕಾತಿಯಲ್ಲಿ ರಾಜ್ಯ ಸರ್ಕಾರದ ಪಾತ್ರವನ್ನು ರದ್ದುಪಡಿಸಲಾಗಿದೆ.

**11**. ಈ ಬಗ್ಗೆ ನಮ್ಮ ಅಸಮಾಧಾನವನ್ನು ವ್ಯಕ್ತಪಡಿಸಲು ಇಚ್ಛಿಸುತ್ತಾ ಈ ವಿಷಯದ ಬಗ್ಗೆ ಪ್ರಜಾಸತ್ತಾತ್ಮಕವಲ್ಲದ ಮತ್ತು ಒಕ್ಕೂಟ ವ್ಯವಸ್ಥೆಗೆ ವಿರುದ್ಧವಾಗಿರುವ ಯುಜಿಸಿ ಸ್ವಭಾವದ ವಿರುದ್ಧ ಪ್ರತಿಭಟಿಸುತ್ತೇವೆ. ರಾಜ್ಯ ಸರ್ಕಾರ ಎಲ್ಲಾ ರೀತಿಯ ಆರ್ಥಿಕ ಮತ್ತಿತರ ನೆರವು ನೀಡುವುದರಿಂದ ರಾಜ್ಯದಲ್ಲಿ ಉನ್ನತ ಶಿಕ್ಷಣದ ಪರಿಸರ ವ್ಯವಸ್ಥೆಯನ್ನು ಬಲಪಡಿಸಲು ರಾಜ್ಯ ಸರ್ಕಾರಗಳಿಗೆ ಹೆಚ್ಚಿನ ಜವಾಬ್ದಾರಿ ಇದೆ.

**12**. ಹುಡುಕಾಟ ಮತ್ತು ಆಯ್ಕೆ ಸಮಿತಿಗಳಲ್ಲಿ ರಾಜ್ಯ ಸರ್ಕಾರದ ನಾಮನಿರ್ದೇಶಿತ ವ್ಯಕ್ತಿಗಳನ್ನು ಒಳಗೊಳ್ಳದಿರುವುದು ಭಾರತದ ಸಂವಿದಾನ ಮತ್ತು ಒಕ್ಕೂಟ ವ್ಯವಸ್ಥೆಗೆ ವಿರುದ್ಧವಾಗಿದೆ. ವಿಶ್ವವಿದ್ಯಾಲಯಗಳನ್ನು ನಡೆಸಲು ಬಹುತೇಕ ಅನುದಾನವನ್ನು ನೀಡುವ ರಾಜ್ಯ ಸರ್ಕಾರಗಳನ್ನು ವಿಶ್ವವಿದ್ಯಾಲಯದ ವ್ಯವಸ್ಥೆಯಿಂದ ಸಂಪೂರ್ಣವಾಗಿ ಹೊರಗಿಡುವ ಯುಜಿಸಿ ಪ್ರಯತ್ನವನ್ನು ಒಪ್ಪಿಕೊಳ್ಳುವುದು ಅಸಾಧ್ಯ.

**13**. ಕೇಂದ್ರ ಸರ್ಕಾರದಿಂದ ನೇಮಕವಾಗುವ ರಾಜ್ಯಪಾಲರ ಮೂಲಕ ರಾಜ್ಯದ ವಿಶ್ವವಿದ್ಯಾಲಯಗಳ ಮೇಲೆ ನಿಯಂತ್ರಣ ಸಾಧಿಸುವ ಪ್ರಯತ್ನ ಪ್ರಜಾಸತ್ತಾತ್ಮಕವಾದುದಲ್ಲ. ಆದ್ದರಿಂದ, ಕುಲಪತಿಗಳ ಆಯ್ಕೆಯಲ್ಲಿ ರಾಜ್ಯ ಸರ್ಕಾರದ ನಾಮನಿರ್ದೇಶಿತರನ್ನು ಹುಡುಕಾಟ ಮತ್ತು ಆಯ್ಕೆ ಸಮಿತಿಯಲ್ಲಿ ಕಡ್ಡಾಯವಾಗಿ ಸೇರ್ಪಡೆ ಮಾಡಬೇಕು.

**14**. ರಾಜ್ಯ ಸರ್ಕಾರಗಳಿಂದ ಸ್ಥಾಪಿತವಾದ ವಿಶ್ವವಿದ್ಯಾಲಯಗಳಿಗೆ ರಾಜ್ಯ ಸರ್ಕಾರವೇ ಒಟ್ಟಾರೆ ಅಭಿವೃದ್ಧಿಗಾಗಿ, ವೇತನ ಮತ್ತು ಇತರೆ ಭತ್ಯೆಗಳು, ಮಾನವ, ಭೌತಿಕ ಮತ್ತು ತಾಂತ್ರಿಕ ಮೂಲಸೌಕರ್ಯಗಳ ಸೃಜನೆ ಮತ್ತು ನಿರ್ವಹಣೆ, ವಿದ್ಯಾರ್ಥಿಗಳಿಗೆ ನೆರವು ಒದಗಿಸುವ ಸೌಲಭ್ಯ ಇತ್ಯದಿಗಳನ್ನು ಒದಗಿಸುತ್ತದೆ. ಈ ಮೂಲಕ ಸಮಾಜದ ಎಲ್ಲಾ ವರ್ಗಗಳಿಗೆ ಉನ್ನತ ಶಿಕ್ಷಣಕ್ಕೆ ಪ್ರವೇಶ ಕಲ್ಪಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರಕ್ಕೆ ಹೆಚ್ಚಿನ ಜವಾಬ್ದಾರಿ ಮತ್ತು ಬದ್ಧತೆ ಇದೆ.

**15**. ನಿಯಮಗಳನ್ನು ಕಡ್ಡಾಯಗೊಳಿಸಿ ಹೇರಿರುವುದು ಮತ್ತು ಪ್ರಸ್ತಾಪಿತ ಯುಜಿಸಿ ನಿಯಮಗಳ ಪರಿಪಾಲನೆ ಮಾಡದಿರುವುದಕ್ಕೆ ಕಟ್ಟುನಿಟ್ಟಾಗಿ ದಂಡ ವಿಧಿಸುವುದು ಪ್ರಜಾಸತ್ತಾತ್ಮಕವಲ್ಲದ ಮತ್ತು ದೇಶದ ಒಕ್ಕೂಟ ವ್ಯವಸ್ಥೆಯ ತತ್ವಗಳಿಗೆ ವಿರುದ್ಧವಾಗಿದೆ. ಕರಡು ಯುಜಿಸಿ ನಿಯಮಗಳು, 2025 ರಾಜ್ಯ ಸರ್ಕಾರಗಳು ಸ್ಥಾಪಿಸಿರುವ ವಿಶ್ವವಿದ್ಯಾಲಯಗಳ ಮೇಲೆ ನಿಯಂತ್ರಣ ಸಾಧಿಸುವ ಹುನ್ನಾರವಾಗಿದೆ. ಯುಜಿಸಿ ಮತ್ತು ಕೇಂದ್ರ ಸರ್ಕಾರದ ಈ ನಡೆ ಒಕ್ಕೂಟ ತತ್ವಗಳಿಗೆ ವಿರುದ್ಧವಾಗಿದ್ದು, ರಾಜ್ಯಗಳ ಹಕ್ಕುಗಳಿಗೆ ಸಂಬಂಧಿಸಿದಂತೆ ಮಧ್ಯಪ್ರವೇಶ ಮಾಡಿ ಅಲಕ್ಷಿಸಿದೆ.

**16**. ರಾಜ್ಯ ಸರ್ಕಾರದ ವಿಶ್ವದ್ಯಾನಿಲಯಗಳ ಕುಲಪತಿಗಳ ನೇಮಕಾತಿಗೆ ಸಂಬಂಧಿಸಿದಂತೆ ಕರಡು ನಿಯಮಗಳು ಯುಜಿಸಿ ವ್ಯಾಪ್ತಿಯಿಂದ ಹೊರಗಿದೆ. ಸಂವಿಧಾನದ ಸಮಕಾಲೀನ ಪಟ್ಟಿಯಲ್ಲಿ ಶಿಕ್ಷಣ ವಿರುವುದರಿಂದ ಕುಲಪತಿಗಳ ನೇಮಕಾತಿಯು ರಾಜ್ಯ ಸರ್ಕಾರಗಳ ವ್ಯಾಪ್ತಿಗೊಳಪಟ್ಟಿದೆ.

**17**. ಉನ್ನತ ಶಿಕ್ಷಣದ ಎಲ್ಲಾ ಅಂಶಗಳಲ್ಲಿಯೂ ಪ್ರಜಾಸತ್ತಾತ್ಮಕ ಪ್ರವೇಶ, ಗುಣಮಟ್ಟದ ಶಿಕ್ಷಣ ಮತ್ತು ಸಾಮಾಜಿಕ ನ್ಯಾಯ ಒದಗಿಸುವ ಸಾಮಾಜಿಕ ಅಗತ್ಯವನ್ನು ಮನಗಂಡು ಹಾಗೂ ಜಿಇಆರ್ ನ್ನು ಹೆಚ್ಚಿಸುವ ನಿಟ್ಟಿನಲ್ಲಿ ರಾಜ್ಯ ವಿಶ್ವವಿದ್ಯಾನಿಲಯಗಳನ್ನು ರಾಜ್ಯ ಸರ್ಕಾರ ಸ್ಥಾಪಿಸುತ್ತದೆ. ರಾಜ್ಯ ಸರ್ಕಾರಕ್ಕೆ ಕುಲಪತಿಗಳ ನೇಮಕಾತಿಯಲ್ಲಿ ಸೂಕ್ತ ನಿರ್ಧಾರಗಳನ್ನು ತೆಗೆದುಕೊಳ್ಳಲು, ಶಿಫಾರಸ್ಸು ಮಾಡಲು ಎಲ್ಲಾ ಹಕ್ಕೂ ಇದೆ. ಕೇಂದ್ರ ಸರ್ಕಾರದ ಏಕಪಕ್ಷೀಯ ನಿರ್ಧಾರವು ಸಹಕಾರಿ ಒಕ್ಕೂಟದ ತತ್ವಗಳ ಮೇಲೆ ನೇರ ಪ್ರಹಾರ ಮಾಡಿದಂತಿದೆ. ವಿಶ್ವವಿದ್ಯಾಲಯಗಳ ಆಡಳಿತದಿಂದ ರಾಜ್ಯ ಸರ್ಕಾರಗಳ ಪಾತ್ರವನ್ನು ತೆಗೆದುಹಾಕಿ ಪ್ರಜಾಸತ್ತಾತ್ಮಕವಲ್ಲದ ರೀತಿಯಲ್ಲಿ ಅಧಿಕಾರವನ್ನು ಕೇಂದ್ರೀಕೃತಗೊಳಿಸುತ್ತಿದೆ.

**18**. ಕೇಂದ್ರದ ಈ ನಡೆ ರಾಜ್ಯ ಸರ್ಕಾರದ ಸಂಸ್ಥೆಗಳನ್ನು ಅಲಕ್ಷಿಸಿ ಶಿಕ್ಷಣದ ಮೇಲೆ ಕೇಂದ್ರದ ನಿಯಂತ್ರಣವನ್ನು ಸಾಧಿಸಲು ತನ್ನ ವಿಸ್ತೃತ ಕಾರ್ಯಸೂಚಿಯ ಭಾಗವಾಗಿದೆ. ರಾಜ್ಯ ಸರ್ಕಾರಗಳ ಒಮ್ಮತವಿಲ್ಲದೇ ಎನ್ಇಪಿ 2020 ಹೇರಿರುವುದು ಇದಕ್ಕೆ ಪುಷ್ಠಿಯನ್ನು ನೀಡುತ್ತದೆ.

**19**. ಇದನ್ನು ಅನುಮೋದಿಸಿದರೆ ವಿಶ್ವವಿದ್ಯಾಲಯಗಳಲ್ಲಿ ವಿದ್ವಾಂಸರಲ್ಲದೇ ರಾಜಕೀಯ ಆಪ್ತರಿಂದ ತುಂಬಿಹೋಗಬಹುದು. ಯುಜಿಸಿ ಮತ್ತು ಕೇಂದ್ರ ಸರ್ಕಾರ ರಾಜ್ಯ ಸರ್ಕಾರದ ಸಂಸ್ಥೆಗಳ ಮೇಲೆ ಹಿಡಿತ ಸಾಧಿಸಲು ಉತ್ಸುಕವಾಗಿವೆ. ಕೇಂದ್ರ ಸರ್ಕಾರದ ಪ್ರಮುಖ ವಿಶ್ವವಿದ್ಯಾಲಯಗಳಲ್ಲಿ ತಾರತಮ್ಯ, ಹಣ ದುರುಪಯೋಗ ಮತ್ತು ಆಡಳಿತಾತ್ಮಕ ವೈಫಲ್ಯಗಳ ಮೇಲೆ ಯಾವುದೇ ಕ್ರಮ ಏಕೆ ಕೈಗೊಂಡಿಲ್ಲ.

**20**. ಯುಜಿಸಿ ತಕ್ಷಣವೇ ತನ್ನ ಕರಡು ನಿಯಮಗಳನ್ನು ಹಿಂಪಡೆದು ಯಾವುದೇ ಬದಲಾವಣೆಗಳನ್ನು ತರುವ ಮುನ್ನ ರಾಜ್ಯ ಮಟ್ಟದಲ್ಲಿ ಸಮಾಲೋಚನಾ ಪ್ರಕ್ರಿಯೆಯನ್ನು ಕೈಗೊಳ್ಳಬೇಕು.

## ಕವಿ ಮನಸು

### ಅಂದು ಇಂದಿನ ಜನರು

ಬಡವರು ಮೈತುಂಬ ಬಟ್ಟೆ ತೊಡುವವರಗೆ
ತಾವು ಅಂಗಿಯನ್ನು ತೊಡುವುದಿಲ್ಲವೆಂದು
ಇದ್ದರು ಮಹಾತ್ಮ ಗಾಂದೀಜಿ ಅರೆಬೆತ್ತಲಾಗಿ
ಕುಟುಂಬದ ಸುಖ ಬಯಸದೆ ಅಂದು
ಜನರ ಹಿತಕಾಗಿ ಬಾಳಿದ ಮಹಾತ್ಮರು

ರಾಜಕಾರಣಿಗಳು ಜನರ ಬಗ್ಗೆ ಯೋಚಿಸದೆ
ಮೂಲ ಸೌಕರ್ಯಗಳನು ಒದಗಿಸದೆ
ಅಧಿಕಾರದ ದುರುಪಯೋಗ ಸ್ವಾರ್ಥಕ್ಕಾಗಿ
ಜೊತೆಗೆ ಬಂದು ಬಳಗದ ಹಿತಕ್ಕಾಗಿ
ಸ್ವಜನ ಪಕ್ಷಪಾತಿಗಳು ಇಂದಿನ
ಮುಖಂಡರು

ಬ್ರಿಟೀಷರು ದೇಶ ಬಿಟ್ಟು ತೊಲಗಬೇಕು
ಭಾರತ ದೇಶ ಸ್ವತಂತ್ರ ವಾಗಲೆ ಬೇಕು
ಅದಕಾಗಿ ಜನ ಒಗ್ಗಟ್ಟಾಗಿ ಹೋರಾಡಬೇಕು
ಎಂದು ಜೀವ ಮುಡಿಪಾಗಿಟ್ಟರು ದೇಶದ
ಹಿತಕಾಗಿ
ಸ್ವತಂತ್ರ ಹೋರಾಟಗಾರರು ಅಂದು
ಜೈಲುಸೇರಿದರು

ಅಧಿಕಾರದ ಗದ್ದುಗೆಯನು ಏರಬೇಕು
ಕೋಟಿ ಕೋಟಿ ಹಣ ಸಂಪಾದಿಸಬೇಕು
ಎಂದು ರಾಜಕೀಯ ಪ್ರವೇಶಮಾಡಿ
ಜನರಿಗೆ ಸುಳ್ಳು ಭರವಸೆಯನು ನೀಡಿ
ಅಧಿಕಾರದ ಗದ್ದುಗೆ ಏರಿದರು ಇಂದಿನವರು

ಅಂದಿನವರ ಹಾಗು ಇಂದಿನವರ ಬಗ್ಗೆ
ಈಗಿನ ಯುವಕರು ಯೋಚಿಸಬೇಕು
ಸರಿಯಾದ ವ್ಯಕ್ತಿಗಳನು ವಿಧಾನಸೌಧಕೆ
ಕಳಿಸುವ ಪ್ರಯತ್ನವನು ಮಾಡಬೇಕು
ಆಗ ಮಾತ್ರ ನಾಡಿನ ಪ್ರಜೆಗಳು ಸುಖವಾಗಿ
ಇರುವರು

– ಟಿ ಯಮನಪ್ಪ.
ನಿವೃತ್ತ ಸಹಾಯಕ ಆಡಳಿತಾಧಿಕಾರಿ
ಆ ಕು ಕ ಇಲಾಖೆ ಹೊಸಪೇಟೆ

ಹಂಪಿ ಟೈಮ್ಸ್ SSLC ಮಾರ್ಗದರ್ಶಿ
ಇ-ಪೇಪರ್‌ನಲ್ಲೂ ಲಭ್ಯ
ಕೆಳಗಿನ ವಿಳಾಸಕ್ಕೆ ಭೇಟಿ ನೀಡಿ..
www.hampitimes.com
epaper.hampitimes.com



## ತುಂಗಭದ್ರಾ ನೀರಿನ ಮಟ್ಟ

ಗುರುವಾರ : 06–02–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1615.25 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 7206 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 49.013 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| ಕಳೆದ ವರ್ಷ ಇದೇ ದಿನ | |
| ಇಂದಿನ ಮಟ್ಟ | 1588.13 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 266 ಕ್ಯುಸೆಕ್ |
| ಸಾಮರ್ಥ್ಯ | 9.539 ಟಿಎಂಸಿ |

## ನಿತ್ಯ ಪಂಚಾಂಗ

ಮಾಸ: ಮಾಘ । ಸಂವತ್ಸರ: ಕ್ರೋಧಿ

07–02–2025 – ಶುಕ್ರವಾರ

| | |
|---|---|
| ತಿಥಿ | : ದಶಮಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ರೋಹಿಣಿ |
| ಯೋಗ | : ಇಂದ್ರ |
| ಕರಣ | : ತೈತುಲ |
| ಸೂರ್ಯೋದಯ | : 07:05:18 |
| ಸೂರ್ಯಾಸ್ತ | : 18:17:06 |
| ರಾಹು ಕಾಲ | : 11:17–12:41 |
| ಯಮಘಂಡ ಕಾಲ | : 15:29–16:53 |
| ಗುಳಿಕ ಕಾಲ | : 08:29–09:53 |

ಭಾವಪೂರ್ಣ ಶ್ರದ್ಧಾಂಜಲಿ
ನಿಧನ - ಪುಣ್ಯ ಸ್ಮರಣೆ
ಜಾಹೀರಾತುಗಳಿಗೆ
ವಿಶೇಷ ರಿಯಾಯತಿ
ನಿಧನದ ಬಗ್ಗೆ ಕುಟುಂಬ, ಸ್ನೇಹಿತರು, ಮತ್ತು ಪರಿಚಿತರಿಗೆ ಶೀಘ್ರ ಮತ್ತು ಸರಿಯಾದ ಮಾಹಿತಿ ನೀಡಲು ಇದು ನೆರವಾಗುತ್ತದೆ.
ಜಾಹೀರಾತು ನೀಡಲು ಸಂಪರ್ಕಿಸಿ
ಹಂಪಿ ಟೈಮ್ಸ್
94486 33038

## ಎಸ್‌ಎಸ್‌ಎಲ್‌ಸಿ ಪರೀಕ್ಷೆ–2025

# ಕಿರು ಪುಸ್ತಕ, ಮೈಕ್ರೋ ಬುಕ್ ಮೈಕ್ರೋ ಜೆರಾಕ್ಸ್ ಮಾರಾಟ ಮತ್ತು ಉಪಯೋಗ ನಿರ್ಬಂಧ

### ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಬಿ.ಉಮಾದೇವಿ ಸೂಚನೆ

■ ಹಂಪಿ ಟೈಮ್ಸ್ ಬಳ್ಳಾರಿ

ಜಿಲ್ಲೆಯಲ್ಲಿ ಪ್ರಸ್ತಕ ವರ್ಷ ನಡೆಯುವ ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆಯನ್ನು ಮುಕ್ತ, ಪಾರದರ್ಶಕವಾಗಿ ನಡೆಸಲು ಮತ್ತು ಪರೀಕ್ಷಾ ಪಾವಿತ್ರ್ಯತೆ ಕಾಪಾಡಲು ಜಿಲ್ಲೆಯಾದ್ಯಂತ ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಸಂಬಂಧಿಸಿದ ಎಲ್ಲಾ ಕಿರು ಪುಸ್ತಕಗಳು, ಮೈಕ್ರೋ ಬುಕ್, ಮೈಕ್ರೋ ಜೆರಾಕ್ಸ್‌ಗಳನ್ನು ಮಾರಾಟ, ಖರೀದಿ ಮತ್ತು ಶಾಲಾ ಆವರಣದಲ್ಲಿ ಬಳಕೆಯನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ ಎಂದು ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಬಿ.ಉಮಾದೇವಿ ಅವರು ತಿಳಿಸಿದ್ದಾರೆ.

ಈ ಕುರಿತು ಕಲಬುರಗಿಯ ಶಾಲಾ ಶಿಕ್ಷಣ ಇಲಾಖೆಯ ಅಪರ ಆಯುಕ್ತರು ಸುತ್ತೋಲೆ ಹೊರಡಿಸಿರುತ್ತಾರೆ. ಹಾಗಾಗಿ ಜಿಲ್ಲೆಯಲ್ಲಿನ ಎಲ್ಲಾ ಪುಸ್ತಕ ಮಾರಾಟ ಮಳಿಗೆಗಳಲ್ಲಿ ಹಾಗೂ ಜೆರಾಕ್ಸ್ ಸೆಂಟರ್‌ಗಳ ಮಾಲೀಕರು ಕಿರು ಪುಸ್ತಕಗಳನ್ನು ಹಾಗೂ ಮೈಕ್ರೋ ಬುಕ್, ಮೈಕ್ರೋ ಜೆರಾಕ್ಸ್‌ಗಳನ್ನು ಮಾರಾಟ ಮಾಡುವುದಾಗಲೀ, ಖರೀದಿಸುವುದಾಗಲೀ ಅಥವಾ ಬಳಸುವುದಾಗಲೀ ಸಂಪೂರ್ಣವಾಗಿ ನಿರ್ಬಂಧಿಸಲಾಗಿದೆ.

ಇದಕ್ಕೆ ಸಂಬಂಧಿಸಿದ ಯಾವುದೇ ಕಾನೂನು ಬಾಹಿರವಾಗಿ ಕಂಡುಬಂದಲ್ಲಿ ಸಂಬಂಧಿಸಿದವರ ವಿರುದ್ಧ ಕಾನೂನಿನಲ್ಲಿನ ಅವಕಾಶ ಬಳಸಿಕೊಂಡು ಇಲಾಖೆಯು ವಿಚಾರಣೆ ನಡೆಸಿ ಇಂತಹ ಪ್ರಕರಣಗಳಲ್ಲಿ ಭಾಗಿಯಾದವರಿಗೆ 3ರಿಂದ 5 ವರ್ಷ ಜೈಲು, 5 ಲಕ್ಷ ದಂಡ ವಿಧಿಸುವ ಅವಕಾಶವಿದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮೈಲಾರ ಜಾತ್ರೆಗೆ ಸಿದ್ಧತೆ ಜೋರು



**ವಿಜಯನಗರ ಜಿಲ್ಲೆಯ ಹಡಗಲಿ ತಾಲೂಕು ಮೈಲಾರ ಗ್ರಾಮದಲ್ಲಿ ಶ್ರೀ ಮೈಲಾರ ಲಿಂಗೇಶ್ವರ ಕಾರ್ಣಿಕೋತ್ಸವ ಹಾಗೂ ಜಾತ್ರೆಗೆ ಆಗಮಿಸುವ ಭಕ್ತರಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಸಂಬಂಧ ಜಿಲ್ಲಾಧಿಕಾರಿಗಳ ನಿರ್ದೇಶನದ ಮೇರೆಗೆ ಪೂರ್ವ ಸಿದ್ಧತೆ ಕಾರ್ಯಗಳು ಭರದಿಂದ ಸಾಗುತ್ತಿವೆ.**



SSLC ಈ ಬಾರಿ ಫಲಿತಾಂಶ ನಮ್ಮದೆ ಹೈಸ್ಕೋರ್‌ಗೆ ಈಗಿಂದಲೇ ಪುನರ್‌ಮನನ ಮಾಡಿ
HAMPI TIMES MARGADARSHI
ಪರೀಕ್ಷೆಗೆ ನಾವು ಸಿದ್ಧ 42 ದಿನ
ಮನಸ್ಸು ಮಾಡು-ಕರ್ತವ್ಯ ನಿಷ್ಟನಾಗು-ಕಾದು ನೋಡು
https://epaper.hampitimes.com
ನಿನ್ನ ಬಾಳಿಗೆ ನೀನೇ ಶಿಲ್ಪಿ
ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ವಿಜ್ಞಾನ
www.hampitimes.com - Hampi Times Margadarshi

### ವಿಜ್ಞಾನ ಮಾದರಿ ಪ್ರಶ್ನೆ ಪತ್ರಿಕೆ

ಸಮಯ : 1.30 ನಿಮಿಷ ಅಂಕಗಳು : 40

ಭಾಗ – A (ಭೌತವಿಜ್ಞಾನ)

1. ಓಮ್ ನ ನಿಯಮವು ಇವುಗಳ ನಡುವಿನ ಸಂಬಂಧವನ್ನು ಸೂಚಿಸುತ್ತದೆ.
   a. ವಿಭವಾಂತರ ಮತ್ತು ರೋಧ.
   b. ವಿಭವಾಂತರ ಮತ್ತು ವಿದ್ಯುತ್ ಆವೇಶ.
   c. ವಿದ್ಯುತ್ ಪ್ರವಾಹ ಮತ್ತು ವಿಭವಾಂತರ.
   d. ವಿದ್ಯುತ್ ಪ್ರವಾಹ ಮತ್ತು ವಿದ್ಯುತ್ ಸಾಮರ್ಥ್ಯ.
2. ವಯಸ್ಸಾದವರಿಗೆ ಕಣ್ಣಿನ ಸ್ಪಟಿಕ ಮಸೂರವು ಹಾಲಿನಂತೆ ಬೆಳ್ಳಗೆ ಹಾಗೂ ಮೋಡಕವಿದಂತೆ ಇರುತ್ತದೆ. ಈ ಸ್ಥಿತಿಯನ್ನು ಹೀಗೆ ಕರೆಯುತ್ತಾರೆ.
   a. ಕ್ಯಾಟರಾಕ್ಟ್ b. ಮಯೋಪಿಯಾ
   c. ಪ್ರೆಸ್ ಬಯೋಪಿಯಾ d. ಹೈಪರ್ ಮೆಟ್ರೋಪಿಯ
3. ಗೃಹ ವಿದ್ಯುತ್ ಮಂಡಲದಲ್ಲಿ ವಿದ್ಯುತ್ ಉಪಕರಣಗಳನ್ನು ಸಮಾಂತರವಾಗಿ ಜೋಡಿಸಿರುತ್ತಾರೆ. ಏಕೆ?
4. ಬೆಳಕಿನ ವಕ್ರೀಭವನದ ನಿಯಮಗಳನ್ನು ಬರೆಯಿರಿ.
5. ದೃಷ್ಟಿದೋಷಗಳು ಎಂದರೇನು? ದೃಷ್ಟಿ ದೋಷಗಳು ಉಂಟಾಗಲು ಕಾರಣಗಳನ್ನು ತಿಳಿಸಿ.
6. ಒಂದು ವಿದ್ಯುತ್ ಮಂಡಲದಲ್ಲಿ ರೋಧಕಗಳಾದ R1 R2 R3 ಗಳು ಕ್ರಮವಾಗಿ 5 Ω, 10 Ω, 30 Ω ಬೆಲೆಗಳನ್ನು ಹೊಂದಿವೆ. ಇವುಗಳನ್ನು 12V ವಿಭವಾಂತರವಿರುವ ಒಂದು ಶುಷ್ಕಕೋಶಕ್ಕೆ ಸಮಾಂತರವಾಗಿ ಜೋಡಿಸಿದಾಗ ಮಂಡಲದಲ್ಲಿ ಉಂಟಾಗುವ ಒಟ್ಟು ರೋಧವನ್ನು ಲೆಕ್ಕಾಚಾರ ಮಾಡಿ?

7.a. ಜೌಲನ ಉಷ್ಣೋತ್ಪಾದನಾ ನಿಯಮವನ್ನು ಬರೆಯಿರಿ.
b. ವಿದ್ಯುತ್ ಮಂಡಲದಲ್ಲಿ ಓವರ್ ಲೋಡ್ ಉಂಟಾಗಲು ಕಾರಣವೇನು? ಓವರ್ ಲೋಡನ್ನು ತಡೆಗಟ್ಟಬಹುದಾದ ಕ್ರಮಗಳನ್ನು ತಿಳಿಸಿ?

ಭಾಗ – B ( ರಸಾಯನ ವಿಜ್ಞಾನ )

1. ನೀರಿನ ವಿದ್ಯುತ್ ವಿಭಜನೆ ಕ್ರಿಯೆಯಲ್ಲಿ ಬಿಡುಗಡೆಯಾಗುವ ಅನಿಲಗಳು
   a. ಹೈಡ್ರೋಜನ್ b. ಆಕ್ಸಿಜನ್
   c. a ಮತ್ತು b d. a ಮಾತ್ರ
2. ತಾಮ್ರ ಮತ್ತು ಸತುವಿನಿಂದ ಮಾಡಲ್ಪಟ್ಟ ಮಿಶ್ರಲೋಹ
   a. ಬೆಸುಗೆ ಲೋಹ b. ಕಂಚು
   c. ಹಿತ್ತಾಳೆ d. ಕಲೆರಹಿತ ಉಕ್ಕು
3. ಬ್ಲೀಚಿಂಗ್ ಪುಡಿಯ ರಾಸಾಯನಿಕ ಹೆಸರೇನು?

6. ಸಾರರಿಕ್ತ ಸಲ್ಫ್ಯೂರಿಕ್ ಆಮ್ಲದೊಂದಿಗೆ ಸತುವಿನ ಚೂರುಗಳ ವರ್ತನೆ ಮತ್ತು ಉರಿಸುವಿಕೆ ಮೂಲಕ ಹೈಡ್ರೋಜನ್ ಅನಿಲದ ಪರೀಕ್ಷೆಯನ್ನು ತೋರಿಸಲು ಉಪಯೋಗಿಸುವ ಉಪಕರಣಗಳ ಜೋಡಣೆಯ ಚಿತ್ರವನ್ನು ಬರೆಯಿರಿ.

4. ಈ ಕೆಳಗಿನವುಗಳಿಗೆ ಸರಿದೂಗಿಸಿದ ರಾಸಾಯನಿಕ ಸಮೀಕರಣಗಳನ್ನು ಬರೆಯಿರಿ.
   a. ಪೊಟ್ಯಾಷಿಯಂ ಲೋಹ ನೀರಿನಲ್ಲಿ ವರ್ತಿಸಿದೆ.
   b. ತಾಮ್ರದ ಸಲ್ಫೇಟ್ ದ್ರಾವಣದೊಂದಿಗೆ ಕಬ್ಬಿಣ ವರ್ತಿಸಿದೆ.
5. ಉರಿಯುವಿಕೆ ಮತ್ತು ಕಾಸುವಿಕೆಗಳಿಗೆ ಇರುವ ವ್ಯತ್ಯಾಸವೇನು?

7.a. ಎಲೆಕ್ಟ್ರಾನ್ ವರ್ಗಾವಣೆಯಿಂದ ಸೋಡಿಯಂ ಕ್ಲೋರೈಡ್ ಅಣುವಿನ ಉಂಟಾಗುವಿಕೆಯನ್ನು ತೋರಿಸಿ.
b. ನೈಟ್ರೋಜನ್ ಮತ್ತು ಈಥೀನ್ ನ ಇಲೆಕ್ಟ್ರಾನ್ ಚುಕ್ಕೆ ರಚನೆಗಳನ್ನು ಬರೆಯಿರಿ.

ಭಾಗ – C ( ಜೀವ ವಿಜ್ಞಾನ )

6. ಈ ಕೆಳಗಿನವುಗಳಲ್ಲಿ ಯಾವುದರಿಂದ ಒಂದು ಆಹಾರ ಸರಪಳಿಯನ್ನು ರಚಿಸಬಹುದು?
   a. ಹುಲ್ಲು, ಗೋಧಿ ಮತ್ತು ಮಾವು
   b. ಹುಲ್ಲು, ಮೇಕೆ ಮತ್ತು ಮಾನವ
   c. ಮೇಕೆ, ಹಸು ಮತ್ತು ಆನೆ
   d. ಹುಲ್ಲು, ಮೀನು ಮತ್ತು ಮೇಕೆ

1. ಮಾನವನ ಸಣ್ಣ ಕರುಳಿನಲ್ಲಿ ನಡೆಯುವ ಜೀರ್ಣಕ್ರಿಯೆಯನ್ನು ವಿವರಿಸಿ.
2. ಪೋಷಣಾಸ್ತರಗಳು ಎಂದರೇನು?
3. ಮಾನವನ ಮೆದುಳಿನ ಅಂದವಾದ ಚಿತ್ರ ಬಿಡಿಸಿ. ಮೆಡುಲ್ಲಾ ಮತ್ತು ಅನುಮಸ್ತಿಷ್ಕವನ್ನು ಗುರುತಿಸಿ, ಅವುಗಳ ಕಾರ್ಯವನ್ನು ಬರೆಯಿರಿ?

4.a. ಶಲಾಕಾಗ್ರದ ಮೇಲೆ ಪರಾಗದ ಮೊಳೆಯುವಿಕೆಯ ಚಿತ್ರ ಬಿಡಿಸಿ ಭಾಗಗಳನ್ನು ಗುರುತಿಸಿ.
b. ನಿಷೇಚನದ ನಂತರ ಹೂವಿನಲ್ಲಾಗುವ ಬದಲಾವಣೆಗಳೇನು?

5. ದುಂಡನೆಯ, ಹಸಿರು ಬಣ್ಣದ ಬೀಜಗಳನ್ನು ಉತ್ಪಾದಿಸುವ ಬಟಾಣಿ ಸಸ್ಯಗಳನ್ನು (RR yy) ಸುಕ್ಕಾದ ಹಳದಿ ಬಣ್ಣದ ಬೀಜಗಳನ್ನು ಉತ್ಪಾದಿಸುವ ಬಟಾಣಿ ಸಸ್ಯದೊಂದಿಗೆ (rr YY) ಸಂಕರಣಗೊಳಿಸಿದೆ. ಈ ಪೀಳಿಗೆಯ ಫಲಿತಾಂಶವನ್ನು ಚಕ್ಕರ್ ಬೋರ್ಡ್ ಸಹಾಯದಿಂದ ವ್ಯಕ್ತಪಡಿಸಿ ಮತ್ತು ಸಸ್ಯಗಳ ವಿಧಗಳ ಅನುಪಾತಗಳನ್ನು ಬರೆಯಿರಿ.

ವಿದ್ಯಾರ್ಥಿಗಳಿಗೆ ಸೂಚನೆ :
ಈ ಮೇಲಿನ ಪ್ರಶ್ನೆಪತ್ರಿಕೆ ಮಾದರಿ ಮಾತ್ರ. ಇದನ್ನು ಬಿಡಿಸುವುದರ ಮೂಲಕ ಪರೀಕ್ಷೆಗೆ ಸಿದ್ಧರಾಗಿ.

-: BEST OF LUCK :-

ಮಾರ್ಗದರ್ಶಿ ಶಿಕ್ಷಕರು : ಶಿವತನಯ ಎಸ್.ಸಿ.. ವಿಜ್ಞಾನ ಶಿಕ್ಷಕರು, ಎಸ್.ಜಿ.ಬಿ.ಪ್ರೌಢಶಾಲೆ, ಬೆಣಕಲ್ಲು, ಹ.ಬೊ.ಹಳ್ಳಿ (ತಾ) ವಿಜಯನಗರ (ಜಿಲ್ಲೆ )

ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠ, ಹೊಸಪೇಟೆ

ಈ ಬಾರಿ ಫಲಿತಾಂಶ ನಮ್ಮದೇ
ಹಂಪಿ ಟೈಮ್ಸ್ ವಿಜಯನಗರದ ಹೆಮ್ಮೆ

ಎಸ್ಸೆಸ್ಸೆಲ್ಸಿ ವಿಜ್ಞಾನ ಚಿತ್ರಸ್ಪರ್ಧೆ-11

ವಾರ್ಷಿಕ ಪರೀಕ್ಷೆಗೆ ಇಂದಿನಿಂದಲೇ ಸಿದ್ಧರಾಗೋಣ...

ವಿಷಯ: R1 R2 R3 ಮೂರು ರೋಧಕಗಳನ್ನು ಸರಣಿ ಕ್ರಮದಲ್ಲಿ ಮತ್ತು ಸಮಾಂತರ ಕ್ರಮದಲ್ಲಿ ಜೋಡಿಸಿರುವ ವಿದ್ಯುತ್ ಮಂಡಲದ ನಕ್ಷೆ ಬಿಡಿಸಿ.

ಸೂಚನೆ: ಎ/4 ಹಾಳೆಯ ಅರ್ಧ ಭಾಗದಲ್ಲಿ ಪೆನ್ಸಿಲ್ ಬಳಸಿ ಚಿತ್ರ ಬಿಡಿಸಬೇಕು. ಶಾಲೆಯ ಶಿಕ್ಷಕರು ವಿದ್ಯಾರ್ಥಿಗಳು ಬಿಡಿಸಿದ ಅತ್ಯುತ್ತಮ ಒಂದು ಚಿತ್ರವನ್ನು ವಿದ್ಯಾರ್ಥಿಯ ಹೆಸರು, ಫೋಟೊ, ಮಾರ್ಗದರ್ಶಿ ಶಿಕ್ಷಕರ ಹೆಸರು ಮತ್ತು ಶಾಲೆ ವಿಳಾಸದೊಂದಿಗೆ ವಾಟ್ಸಪ್‌ಗೆ ಕಳಿಹಿಸಲು ಮನವಿ.

07-02-2025

ರಾಜ್ಯಾದ್ಯಂತ 10ನೇ ತರಗತಿ ಓದುತ್ತಿರುವ ವಿದ್ಯಾರ್ಥಿಗಳು ಶುಕ್ರವಾರ ತಮ್ಮ ಶಾಲೆಯಲ್ಲಿ ಶಿಕ್ಷಕರ ಸಮ್ಮುಖದಲ್ಲಿ 10 ನಿಮಿಷದೊಳಗೆ ಚಿತ್ರ ಬಿಡಿಸಿ, ಮುಖ್ಯಗುರುಗಳು/ಶಿಕ್ಷಕರ ಸಹಿ ಮತ್ತು ನೆರವಿನೊಂದಿಗೆ ಶುಕ್ರವಾರ ಸಂಜೆ 6 ಗಂಟೆಯೊಳಗೆ ವಾಟ್ಸಪ್ ನಂಬರ್‌ಗೆ ಕಳುಹಿಸಬಹುದು.

ಶಾಲೆಯ ದಿ ಬೆಸ್ಟ್ ಚಿತ್ರ ಕಳಿಸುವ ವಾಟ್ಸ್‌ಪ್ ನಂ: 99726 03099

ಶಾಲೆಯಲ್ಲಿ ಚಿತ್ರ ಬಿಡಿಸುವ ಸಾಮೂಹಿಕ ಫೋಟೊ ಕಳಿಸುವ ವಾಟ್ಸ್‌ಪ್ ನಂ: 94486 33038

ಮೈಕ್ರೋ ನ್ಯೂಸ್

## ಚಂದ್ರನಾಯ್ಕಗೆ ಗ್ರಾಮೀಣ ಶಿಕ್ಷಣ ರತ್ನ ಪ್ರಶಸ್ತಿ

**ಹಂಪಿ ಟೈಮ್ಸ್ ಹೂವಿನಹಡಗಲಿ**



ಜಿಲ್ಲೆಯ ಹೂವಿನಹಡಗಲಿ ತಾಲೂಕಿನ ಲಿಂಗನಾಯಕನಹಳ್ಳಿ ತಾಂಡಾದ ಸರಕಾರಿ ಕಿರಿಯ ಪ್ರಾಥಮಿಕ ಶಾಲೆಯ ಪ್ರಭಾರಿ ಮುಖ್ಯ ಶಿಕ್ಷಕ ಚಂದ್ರನಾಯ್ಕ ಅವರು 'ರಾಜ್ಯ ಮಟ್ಟದ ಗ್ರಾಮೀಣ ಶಿಕ್ಷಣ ರತ್ನ ಪ್ರಶಸ್ತಿ'ಗೆ ಭಾಜನರಾಗಿದ್ದಾರೆ.

ಕಳೆದ 18 ವರ್ಷಗಳಿಂದ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿರುವ ಚಂದ್ರನಾಯ್ಕ ಅವರ ಸೇವೆಯನ್ನು ಪರಿಗಣಿಸಿ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಶಿಕ್ಷಕ ವೃತ್ತಿಗೆ ಸೇರ್ಪಡೆಗೊಂಡು ಇಲಾಖಾ ಆಶೋತ್ತರಗಳಿಗೆ ಸ್ಪಂದಿಸುತ್ತಾ ಗ್ರಾಮೀಣ ಪ್ರದೇಶದ ಶೈಕ್ಷಣಿಕ ಪ್ರಗತಿಯ ಜತೆಗೆ ಸಲ್ಲಿಸುತ್ತಿರುವ ಸೇವೆ ಮತ್ತು ಶಾಲೆಯ ಸರ್ವತೋಮುಖ ಬೆಳವಣಿಗೆಗಾಗಿ ಶ್ರಮಿಸಿ, ಸಾವಿರಾರು ಮಕ್ಕಳ ಭವಿಷ್ಯ ಉಜ್ವಲಗೊಳಿಸುತ್ತಿರುವ ಸೇವೆಯನ್ನು ಗುರುತಿಸಿ ಪ್ರಶಸ್ತಿ ನೀಡಲಾಗಿದೆ.

ಕರ್ನಾಟಕ ಸರಕಾರಿ ಗ್ರಾಮೀಣ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಬೆಂಗಳೂರು ಗ್ರಾಮಾಂತರ ಘಟಕ ಮತ್ತು ನೆಲಮಂಗಲ ತಾಲೂಕು ಘಟಕದ ಸಂಯುಕ್ತಾಶ್ರಯದಲ್ಲಿ ಫೆ.08ರಂದು ನಡೆಯಲಿರುವ ರಾಜ್ಯ ಮಟ್ಟದ ಶೈಕ್ಷಣಿಕ ಕಾರ್ಯಾಗಾರ ಹಾಗೂ ರಾಜ್ಯ ಮಟ್ಟದ ಗ್ರಾಮೀಣ ಶಿಕ್ಷಣರತ್ನ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪ್ರಶಸ್ತಿ ನೀಡಿ ಗೌರವಿಸಲಾಗುತ್ತದೆ.

## ಫೆ.07 ವಿಶೇಷ ಅಂಚೆ ಲಕೋಟೆ ಬಿಡುಗಡೆ

**ಹಂಪಿ ಟೈಮ್ಸ್ ಬಳ್ಳಾರಿ**

ಅಂಚೆ ಇಲಾಖೆಯಿಂದ ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳ ಸುವರ್ಣ ಮಹೋತ್ಸವದ ನೆನಪಿನಲ್ಲಿ ಅಖಿಲ ಭಾರತ ಗ್ರಾಮೀಣ ಬ್ಯಾಂಕ್‌ಗಳ ನೌಕರರ ಒಕ್ಕೂಟದ ಸಹಯೋಗದಲ್ಲಿ ಫೆ.07 ರಂದು ಬೆಳಿಗ್ಗೆ 10 ಗಂಟೆಗೆ ನಗರದ ಕರ್ನಾಟಕ ಗ್ರಾಮೀಣ ಬ್ಯಾಂಕಿನ ನೌಕರರ ಸಹಕಾರಿ ಸಂಘದ ಸಮುದಾಯ ಭವನದಲ್ಲಿ ವಿಶೇಷ ಅಂಚೆ ಲಕೋಟೆ ಬಿಡುಗಡೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಬಳ್ಳಾರಿ ಅಂಚೆ ವಿಭಾಗದ ಅಂಚೆ ಅಧೀಕ್ಷಕ ಪಿ.ಚಿದಾನಂದ ತಿಳಿಸಿದ್ದಾರೆ.

ಕರ್ನಾಟಕ ವೃತ್ತದ ಮುಖ್ಯ ಪೋಸ್ಟ್ ಮಾಸ್ಟರ್ ಜನರಲ್ ಎಸ್.ರಾಜೇಂದ್ರ ಕುಮಾರ್, ಉತ್ತರ ಕರ್ನಾಟಕ ವಲಯದ ಪೋಸ್ಟ್ ಮಾಸ್ಟರ್ ಜನರಲ್ ಕರ್ನಲ್ ಸುಶೀಲ್ ಕುಮಾರ್, ಕರ್ನಾಟಕ ಗ್ರಾಮೀಣ ಬ್ಯಾಂಕಿನ ಚೇರ್‌ಮನ್ ಡಿ.ಆರ್.ದಿಲ್ಲಿಬಾಬು, ಅಖಿಲ ಭಾರತ ಗ್ರಾಮೀಣ ಬ್ಯಾಂಕ್ ನೌಕರರ ಸಂಘದ ಕಾರ್ಯದರ್ಶಿ ಎಸ್.ವೆಂಕಟೇಶ್ವರ ರೆಡ್ಡಿ, ಅಧ್ಯಕ್ಷರಾದ ಹೆಚ್.ನಾಗಭೂಷಣ ರಾವ್, ವಿ.ಕೆ. ಬನ್ನಿಗೊಳ್, ಸಿ.ರಾಜೀವನ್ ಹಾಗೂ ಇತರರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು. ಸಾರ್ವಜನಿಕರು, ಅಂಚೆ ಚೀಟಿ ಸಂಗ್ರಹಕರು ಮತ್ತು ಆಸಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


## ಬಿಡಾಡಿ ದನಗಳನ್ನು ಮಾಲೀಕರು ಮನೆಯಲ್ಲಿ ಕಟ್ಟಿಕೊಳ್ಳಿ, ನಿರ್ಲಕ್ಷ್ಯಸಿದರೆ ಕ್ರಮ

**ಹಂಪಿ ಟೈಮ್ಸ್ ಕಂಪ್ಲಿ**

ಕಂಪ್ಲಿ ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಬಿಡಾಡಿ ದನಗಳು ಹೆಚ್ಚಾಗುತ್ತಿದ್ದು, ಸಾರ್ವಜನಿಕರ ಪ್ರಾಣ ಹಾನಿ ಹಿನ್ನಲೆಯಲ್ಲಿ ಬಿಡಾಡಿ ದನಗಳ ಮಾಲೀಕರು ತಮ್ಮ ತಮ್ಮ ದನಕರಗಳನ್ನು ತಮ್ಮ ಮನೆಯಲ್ಲಿಯೇ ಕಟ್ಟಿಹಾಕಿಕೊಳ್ಳಬೇಕು. ಇಲ್ಲದಿದ್ದಲ್ಲಿ ಬೀದಿ ದನಗಳನ್ನು ಹಿಡಿದು ಗೋಶಾಲೆಗಳಿಗೆ ಸಾಗಿಸಲು ಕ್ರಮ ವಹಿಸಲಾಗುವುದು ಮತ್ತು ದನಕರುಗಳನ್ನು ಹಿಡಿಯುವವರು ಯಾರಾದರೂ ಇದ್ದಲ್ಲಿ ಪುರಸಭೆ ಕಚೇರಿಗೆ ಸಂಪರ್ಕಿಸಬಹುದು ಎಂದು ಕಂಪ್ಲಿ ಪುರಸಭೆ ಮುಖ್ಯಾಧಿಕಾರಿ ಕೆ.ದುರುಗಣ್ಣ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮಾತಿಗಿಂತ ಕೆಲಸ ಮಾಡುವುದೇ ಯುವಕರ ಹವ್ಯಾಸವಾಗಬೇಕು

### ಸಂಸದ ಕೆ.ರಾಜಶೇಖರ ಬಸವರಾಜ್ ಹಿಟ್ನಾಳ ಹೇಳಿಕೆ | ಕೌಶಲ್ಯ ರೋಜ್‌ಗಾರ್ ಮೇಳ



**ಹಂಪಿ ಟೈಮ್ಸ್ ಕೊಪ್ಪಳ**


ಭಾರತದ ದೇಶವು ಜಗತ್ತಿನ ಅತಿ ಹೆಚ್ಚು ಯುವ ಜನತೆಯನ್ನು ಹೊಂದಿರುವ ರಾಷ್ಟ್ರವಾಗಿದ್ದು, ಯುವಕರು ಕೆಲಸ ಮಾಡುವ ಹವ್ಯಾಸವನ್ನು ಬೆಳಸಿಕೊಳ್ಳಬೇಕು ಎಂದು ಕೊಪ್ಪಳ ಸಂಸದರಾದ ಕೆ.ರಾಜಶೇಖರ ಬಸವರಾಜ್ ಹಿಟ್ನಾಳ ಹೇಳಿದರು.

ಕೊಪ್ಪಳ ನಗರದ ತಾಲೂಕು ಕ್ರೀಡಾಂಗಣದಲ್ಲಿ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ ಹಾಗೂ ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನ ಸಂಸ್ಥೆ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಜಿಲ್ಲಾ ಕೌಶಲ್ಯ ಮಿಷನ್, ಕೊಪ್ಪಳ ಇವರುಗಳ ಸಂಯುಕ್ತಾಶ್ರಯದಲ್ಲಿ ಗುರುವಾರ ಏರ್ಪಡಿಸಿದ್ದ "ಕೌಶಲ್ಯ ರೋಜ್‌ಗಾರ್ ಮೇಳ" ಉದ್ಯೋಗ ಮೇಳ-2025"ರ ಉದ್ಘಾಟನಾ ಸಮಾರಂಭ ನೆರವೇರಿಸಿ ಮಾತನಾಡಿದರು. ಉದ್ಯೋಗ ಮೇಳಗಳು ನಿರುದ್ಯೋಗಿಗಳಿಗೆ ಸಹಕಾರಿಯಾಗಿದ್ದು, ವಿದ್ಯಾರ್ಹತೆಗೆ ತಕ್ಕ ಉದ್ಯೋಗ ಸಿಗುವುದರ ಜೊತೆಗೆ ಅವರ ಆರ್ಥಿಕವಾಗಿ ಸಬಲೀಕರಣಕ್ಕೂ ಅನುಕೂಲ ವಾಗಲಿದೆ. ಇಂದಿನ ದಿನಗಳಲ್ಲಿ ನಿರುದ್ಯೋಗ ಪ್ರಮಾಣ ಹೆಚ್ಚಾಗುತ್ತಿದ್ದು, ಈ ಸಮಸ್ಯೆಯನ್ನು ಹೋಗಲಾಡಿಸಲು ಉದ್ಯೋಗ ಮೇಳಗಳ ಆಯೋಜನೆ ಅತ್ಯವಶ್ಯಕವಾಗಿದೆ. ಉದ್ಯೋಗಾಕಾಂಕ್ಷೆ ಹೊಂದಿರುವ ಯುವಕರು ಇಂತಹ ಮೇಳಗಳಲ್ಲಿ ಭಾಗವಹಿಸಿ, ಉದ್ಯೋಗದ ನೆರವು ಪಡೆದು ಕೊಳ್ಳಬೇಕು. ಇಂದಿನ ತಂತ್ರಜ್ಞಾನ ಯೋಗದಲ್ಲಿ ವಿದ್ಯಾಭ್ಯಾಸದ ಜೊತೆಗೆ ಕೌಶಲ್ಯ ತರಬೇತಿಗಳು ಅತ್ಯವಶ್ಯಕವಾಗಿದ್ದು, ಸರ್ಕಾರಗಳು ಹಲವಾರು ಕೌಶಲ್ಯ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾ ಬರುತ್ತಿವೆ. ಕೌಶಲಾಭಿವೃದ್ಧಿ ತರಬೇತಿಯ ಸದ್ಬಳಕೆಯನ್ನು ಮಾಡಿಕೊಳ್ಳಲು ವಿದ್ಯಾರ್ಥಿಗಳು, ಯುವ ಜನತೆ ಮುಂದೆ ಬರಬೇಕೆಂದರು.

ಒಂದು ಎಕರೆ ನೀರಾವರಿ ಭೂಮಿಯಲ್ಲಿ ತೋಟಗಾರಿಕೆ ಮಾಡುವ ಮೂಲಕ ವಾರ್ಷಿಕ ನಾಲ್ಕು ಲಕ್ಷ ಆದಾಯವನ್ನು ಗಳಿಸಬಹುದು. ಇದರ ಜೊತೆಗೆ ಹೈನುಗಾರಿಕೆ, ಕುರಿ ಸಾಕಾಣಿಕೆ, ಕೋಳಿ ಸಾಕಾಣಿಕೆಯಂತಹ ಸ್ವಯಂ ಉದ್ಯೋಗಗಳನ್ನು ಕೈಗೆತ್ತಿಕೊಳ್ಳಬಹುದು. ಇದಕ್ಕಾಗಿ ಸರ್ಕಾರದಿಂದ ಸಾಲ, ಸಹಾಯಧನ ಸೌಲಭ್ಯಗಳಿವೆ ಎಂದರು. .

ಉದ್ಯೋಗ ಮೇಳದಲ್ಲಿ ಉದ್ಯೋಗ ಪಡೆದ ಅಭ್ಯರ್ಥಿಗಳಲ್ಲಿ ಪಲ್ಲವಿ, ಗುರುಮೂರ್ತಿ, ಕನಕರಾಯ ಹಾಗೂ ಇತರರಿಗೆ ಸಾಂಕೇತಿಕವಾಗಿ ಜಾಬ್ ಆಫರ್ ಲೇಟರ್ ವಿತರಣೆ ಮಾಡಲಾಯಿತು. ಕೌಶಲ್ಯ ಮಿಷನ್ ಅಧಿಕಾರಿ. ಸಿಬ್ಬಂದಿ ಇದ್ದರು.

ಆನಂದ ಬಾಣ




ಚಿತ್ರ ಸುದ್ದಿ



ಹೊಸಪೇಟೆ ಜಿಲ್ಲಾಧಿಕಾರಿ ಕಾರ್ಯಾಲಯದಲ್ಲಿ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಅವರು ಹಂಪಿ ಉತ್ಸವ 2025 ಕ್ಕೆ ಸಂಬಂಧಿಸಿದಂತೆ ಹಂಪಿ ಬೈ-ಸ್ಕೈ ಕುರಿತು ಪ್ರವಾಸೋದ್ಯಮ ಅಧಿಕಾರಿಗಳು ಹಾಗೂ Tunmbe Aviation & Chipson ಸಂಸ್ಥೆಗಳೊಂದಿಗೆ ಗುರುವಾರ ಸಭೆ ನಡೆಸಿದರು.

For Advertisements Call: 9448633038

### ಮುಕ್ತ ಸಂವಾದ ಕಾರ್ಯಕ್ರಮದಲ್ಲಿ ಎಸ್.ಆರ್. ಮೆಹರೋಜ್ ಖಾನ್ ಹೇಳಿಕೆ

# ಗ್ಯಾರಂಟಿ ಯೋಜನೆಗಳಿಂದ ಸಮಾಜದಲ್ಲಿ ಧನಾತ್ಮಕ ಬದಲಾವಣೆ



**ಹಂಪಿ ಟೈಮ್ಸ್ ಬಳ್ಳಾರಿ**

ರಾಜ್ಯ ಸರ್ಕಾರವು ಜಾರಿಗೆ ತಂದಿರುವ ಪಂಚ ಗ್ಯಾರಂಟಿ ಯೋಜನೆಗಳಿಂದ ಸಮಾಜದಲ್ಲಿ ಧನಾತ್ಮಕ ಬದಲಾವಣೆಗಳು ಆಗುತ್ತಿದ್ದು, ಸಮಾಜಮುಖಿ ಕಾರ್ಯಗಳು ಸಹ ಆಗುತ್ತಿವೆ ಎಂದು ರಾಜ್ಯ ಗ್ಯಾರಂಟಿ ಯೋಜನೆಗಳ ಉಪಾಧ್ಯಕ್ಷ ಎಸ್.ಆರ್.ಮೆಹರೋಜ್ ಖಾನ್ ಅವರು ಹೇಳಿದರು.

ರಾಜ್ಯ ಸರ್ಕಾರದ ಪ್ರತಿಷ್ಠಿತ ಪಂಚ ಗ್ಯಾರಂಟಿ ಯೋಜನೆಗಳ ಕುರಿತು ಸಂಡೂರು ತಾಲ್ಲೂಕಿನ ನಂದಿಹಳ್ಳಿ ಬಳಿಯ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಸ್ನಾತಕೋತರ ಕೇಂದ್ರದಲ್ಲಿ ಪ್ರಾಧ್ಯಾಪಕರು, ಸ್ನಾತಕೋತ್ತರ ಹಾಗೂ ಸಂಶೋಧನಾ ವಿದ್ಯಾರ್ಥಿಗಳೊಂದಿಗೆ ಗುರುವಾರ ಏರ್ಪಡಿಸಿದ್ದ ಮುಕ್ತ ಸಂವಾದ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ರಾಜ್ಯ ಸರ್ಕಾರದ ಪ್ರಮುಖ ಐದು ಗ್ಯಾರಂಟಿ ಯೋಜನೆಗಳ ಸೌಲಭ್ಯವನ್ನು ರಾಜ್ಯದ ನಾಲ್ಕುವರೆ ಕೋಟಿ ಜನರು ಪಡೆದುಕೊಳ್ಳುತ್ತಿದ್ದು, ಶೇ.98 ರಷ್ಟು ಗುರಿ ಪ್ರಗತಿ ಸಾಧಿಸಲಾಗಿದೆ, ಉಳಿದಂತೆ ಶೇಕಡ ನೂರಕ್ಕೆ ನೂರರಷ್ಟು ಪ್ರಗತಿ ಸಾಧಿಸಲು ಪ್ರಯತ್ನಿಸಲಾಗುತ್ತಿದೆ ಎಂದು ಅವರು ತಿಳಿಸಿದರು.

ಗೃಹಲಕ್ಷ್ಮಿ ಯೋಜನೆಯಿಂದ ಮಹಿಳೆಯರಲ್ಲಿ ಆರ್ಥಿಕ ಸ್ವಾವಲಂಬನೆ ಹೆಚ್ಚಾಗುತ್ತಿದೆ. ಸ್ವಯಂ ಉದ್ಯೋಗ ಸೃಷ್ಟಿಯಾಗಿ ನಿರುದ್ಯೋಗ ಕಡಿಮೆಯಾಗುತ್ತಿದೆ. ಪಂಚ ಗ್ಯಾರಂಟಿ ಯೋಜನೆಗಳು ಎಲ್ಲ ಅರ್ಹ ಫಲಾನುಭವಿಗಳಿಗೆ ತಲುಪಿಸುವ ಕೆಲಸ ಪ್ರತಿ ತಾಲ್ಲೂಕಿನಲ್ಲಿ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರವು ಮಾಡುತ್ತಿದೆ ಎಂದು ಅವರು ತಿಳಿಸಿದರು.

ಸಂಡೂರು ಶಾಸಕರಾದ ಈ.ಅನ್ನಪೂರ್ಣ ಅವರು ಮಾತನಾಡಿ, ರಾಜ್ಯದ ಮಹತ್ವಕಾಂಕ್ಷಿ ಯೋಜನೆಗಳಾದ ಪಂಚ ಗ್ಯಾರಂಟಿಗಳನ್ನು ಸಿಎಂ ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರ ತುಂಬಾ ಆಸಕ್ತಿಯಿಂದ ಜಾರಿ ಮಾಡಿದೆ. ಎಲ್ಲಾ ಅಧಿಕಾರಿಗಳು ಮತ್ತು ಪ್ರಾಧಿಕಾರವೂ ಸೇರಿ ಪಂಚ ಗ್ಯಾರಂಟಿಗಳ ಸಮರ್ಪಕ ಅನುಷ್ಠಾನಕ್ಕೆ ಶ್ರಮಿಸಬೇಕೆಂದು ಕರೆ ನೀಡಿದರು.

ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಕೆ.ಇ.ಚಿದಾನಂದಪ್ಪ ಅವರು ಮಾತನಾಡಿ, ಗೃಹಲಕ್ಷ್ಮಿ ಯೋಜನೆ ಕೇವಲ ತಾಯಂದಿರು ಮಾತ್ರವಲ್ಲ, ಹಲವು ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೂ ನೆರವಾಗುತ್ತಿದೆ. ವಿದ್ಯಾರ್ಥಿಗಳ ಭವಿಷ್ಯಕ್ಕೆ ಪಂಚ ಗ್ಯಾರಂಟಿ ಯೋಜನೆಗಳು ಸದ್ಬಳಕೆಯಾಗುತ್ತಿವೆ. ಶಕ್ತಿ ಯೋಜನೆಯಿಂದ ವಿದ್ಯಾರ್ಥಿಗಳು ಸೇರಿದಂತೆ ಎಲ್ಲಾ ಮಹಿಳೆಯರಿಗೆ ಆರ್ಥಿಕ ಉಳಿತಾಯವಾಗುತ್ತಿದೆ ಎಂದು ಅವರು ಹೇಳಿದರು.


ಈ ಸಂದರ್ಭದಲ್ಲಿ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಉಪಾಧ್ಯಕ್ಷರಾದ ಆಶಾಲತಾ ಸೋಮಪ್ಪ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಉಪನಿರ್ದೇಶಕ ವಿಜಯಕುಮಾರ್, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಉಪ ನಿರ್ದೇಶಕರಾದ ಸಕೀನಾ, ಉದ್ಯೋಗ ವಿನಿಮಯ ಕೇಂದ್ರದ ಉದ್ಯೋಗಾಧಿಕಾರಿ ಹಟ್ಟಪ್ಪ, ಡಿಟಿಒ ಚಾಮರಸ ಸೇರಿದಂತೆ, ಜೆಸ್ಕಾಂ ಅಧಿಕಾರಿಗಳು, ವಿವಿ ಸ್ನಾತಕೋತ್ತರ ಕೇಂದ್ರದ ನಿರ್ದೇಶಕರು, ಉಪನ್ಯಾಸಕರು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಹಂಪಿ ಟೈಮ್ಸ್ ವಿಜಯನಗರದ ಹೆಮ್ಮೆ
ಕನ್ನಡ ದಿನಪತ್ರಿಕೆ

ಹಂಪಿ ಟೈಮ್ಸ್ ಮತ್ತು ಹೊಸಪೇಟೆ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಸಹಯೋಗದಲ್ಲಿ

ಈ ಬಾರಿ ಫಲಿತಾಂಶ ನಮ್ಮದೆ

SSLC ವಿದ್ಯಾರ್ಥಿಗಳಿಗಾಗಿ ಫೋನ್ ಇನ್ ಕಾರ್ಯಕ್ರಮ



ಪರೀಕ್ಷೆ ಬಗ್ಗೆ ನಿಮಗಿರುವ ಆತಂಕಗಳು | ವಿಷಯ ವಸ್ತುಗಳ ಬಗೆಗಿನ ಅನುಮಾನ-ಗೊಂದಲ | ಪರೀಕ್ಷಾ ಸಿದ್ಧತೆ | ಭಯರಹಿತ ಪರೀಕ್ಷೆ ಎದುರಿಸುವ ಬಗೆ ಮತ್ತು ನಿಮ್ಮ ಇತರೆ ಪ್ರಶ್ನೆಗಳಿಗೆ ಕೆಳಗಿನ ನಂಬರ್‌ಗಳಿಗೆ ಕರೆಮಾಡಿ ನಿಮ್ಮ ಪ್ರಶ್ನೆಗಳಿಗೆ ಪರಿಹಾರ ಕಂಡುಕೊಳ್ಳಿ

9 ಫೆಬ್ರವರಿ 2025 ಭಾನುವಾರ
ಸಮಯ ಬೆಳಿಗ್ಗೆ 11 ರಿಂದ 12 ವರೆಗೆ

ಬಿಇಒ ಎಂ.ಚನ್ನಬಸಪ್ಪ ಮತ್ತು ವಿಷಯ ತಜ್ಞರು ಪಾಲ್ಗೊಳ್ಳಲಿದ್ದಾರೆ

| | |
|---|---|
| ಕನ್ನಡ | 9880019171 / 7892989253 |
| ಇಂಗ್ಲೀಷ್ | 8317363832 / 9901735338 |
| ಹಿಂದಿ | 9845400842 / 9886500568 |
| ಸಮಾಜ ವಿಜ್ಞಾನ | 9964036271 / 8660953524 |
| ವಿಜ್ಞಾನ | 9945118741 / 9449020826 |
| ಗಣಿತ | 7892641428 / 8884816581 |



www.hampitimes.com
epaper.hampitimes.com

ಸೂಚನೆ: ಎಸ್ ಎಸ್‌ಎಲ್‌ಸಿ ವಿದ್ಯಾರ್ಥಿಗಳು ಕೇಳಬಯಸುವ ಪ್ರಶ್ನೆಗಳನ್ನು ಸ್ಪಷ್ಟವಾಗಿ ಬರೆದಿಟ್ಟುಕೊಂಡು ನಿಗದಿತ ಸಮಯದೊಳಗೆ ವಿದ್ಯಾರ್ಥಿಗಳು/ ಪಾಲಕರು ಕರೆ ಮಾಡಿ